ಸಭೆಯಂ ಮುಂದಿಡಲಾಗುವ ಕಾಗದ ಪತ್ರ

ಕಾರ್ಯದರ್ಶಿ, ಕರ್ನಾಟಕ ವಿಧಾನ ಮಂಡಲ--ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೧೯೯ನೇ ನಿಯಮದ ಮೇರೆಗೆ.

ಕರ್ನಾಟಕ ವಿಧಾನಪರಿಷತ್ತು ೧೯೮೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ವಿಧೇಯಂಕಕ್ಕೆ ಮಾಡಿದ ತಿದ್ದುಪಡಿಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.--ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಈಗ ಎರಡೂ ಕಡೆಯ ಮುಖಂಡರೂ ಬನ್ನಿ. ನನ್ನ ಚೇಂಬರಿಗೆ ಬರುವುದಕ್ಕೆ ಅವರಿಗೂ ಹೇಳಿದ್ದೇನೆ.

ಅಧ್ಯಕ್ಷರು.—ಒಪ್ಪಿಸಲಾಯಿತು. ಈಗ ಮುಂದೆ ಗಮನ ಸೆಳೆಯಂವ ಸೂಚನೆಗಳಂ.

(ಮಾನ್ಯ ಉಪಾಧ್ಯಕ್ಷರಂ, ಅಧ್ಯಕ್ಷ ಸ್ಥಾನದಲ್ಲಿ ಉಪಸ್ಥಿತರಾದರು)

ಗಮನ ಸೆಳೆಯಂವ ಸೂಚನೆಗಳಂ

ಉಪಾಧ್ಯಕ್ಷರು.—ಶ್ರೀಮತಿ ಕೆ.ಎಸ್. ನಾಗರತ್ನಮ್ಮ, ಆಬ್ಸೆಂಟ್,
ಶ್ರೀ ಎಂ.ಎಸ್. ಕೃಷ್ಣನ್, ಆಬ್ಸೆಂಟ್.
ಶ್ರೀ ಟಿ.ಎಸ್. ಮಣಿ, ಆಬ್ಸೆಂಟ್.
ಡಾ॥ ಎ. ಪುಷ್ಪಾವತಿ, ಆಬ್ಸೆಂಟ್.
ಮುಂದೆ ವಿತ್ತೀಯ ಕಾರ್ಯಕಲಾಪ.

ವಿತ್ತೀಯ ಕಾರ್ಯಕಲಾಪಗಳು

1986-87ನೇ ಸಾಲಿನ ಅನುಪೂರಕ ಅಂದಾಜುಗಳನ್ನು ಮಂಡಿಸುವುದು.

ಶ್ರೀ ಎ. ಲಕ್ಷ್ಮೀಸಾಗರ್ (ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ ೨೧೫(೧)ನೇ ಅನುಚ್ಛೇದದ ಮೇರೆಗೆ ೧೯೮೬-೮೭ನೇ ಸಾಲಿಗೆ ಸಂಬಂಧಿಸಿದಂತೆ ಅನುಪೂರಕ ಅಂದಾಜುಗಳನ್ನು (ಎರಡನೇ ಕಂತು) ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅನುಪೂರಕ ಅಂದಾಜುಗಳನ್ನು ಮಂಡಿಸಲಾಯಿತು.

1987-88ನೇ ಸಾಲಿನ ಬೇಡಿಕೆಗಳ ಮಂಡನೆ ಮತ್ತು ಚರ್ಚೆ

ಅಭಿಯಾಚನೆ ಕ್ರಮಾಂಕ-೫೨ ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ದೊರತು)

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೧ ಜೆಟಿ,೭೪,೦೦೦ ರೂಪಾಯಿಗಳಿಗಿಂತ ಮಿಗಾದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬,೮೬,೫೧,೦೦೦ ರೂಪಾಯಿಗಳಿಗಿಂತ ಮಿಗಾದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 56—ಕ್ರಮಪಡಿಸಿದ ಮಾರುಕಟ್ಟೆಗಳಂ

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೭೫,೭೭,೦೦೦ ರೂ.ಗಳಿಗಿಂತ ಮಿಗಾರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವಗಳನ್ನು ಮಂಡಿಸಲಾಯಿತು.

ಉಪಾಧ್ಯಕ್ಷರು.—ಈ ಬೇಡಿಕೆಗಳನ್ನು ಸಭೆಯ ಮುಂದೆ ಇಡಲಾಗಿದೆ. ಈಗ ಇವುಗಳ ಬಗ್ಗೆ ಚರ್ಚೆ ಪ್ರಾರಂಭ ಮಾಡಬೇಕು. ಮಾನ್ಯ ಕೆ. ಹೆಚ್. ಪಾಟೀಲರು ಚರ್ಚೆಯನ್ನು ಪ್ರಾರಂಭಿಸಬೇಕಾಗಿತ್ತು, ಅವರು ಅಬ್ಸೆಂಟ್ ಆಗಿದ್ದಾರೆ. ಮಾನ್ಯ ಗುರುಪಾದಪ್ಪನವರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

೧೧-೪೦ ಎ. ಎಂ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್).—ಸನ್ಮಾನ್ಯ ಅಧ್ಯಕ್ಷರೇ, ಸಹಕಾರ ಇಲಾಖೆಯು ಬೇಡಿಕೆಗಳನ್ನು ಅನುಮೋದಿಸುತ್ತಾ ನನ್ನ ಕೆಲವು ಅನಿಸಿಕೆಗಳನ್ನು ಹೇಳಲು ಇಚ್ಛಿಸುತ್ತೇನೆ. ಇವತ್ತು ಸಹಕಾರ ಸಂಘಗಳು ಯಾವರೀತಿ ಇರಬೇಕು ಹಾಗೂ ಸಹಕಾರ ಸಂಘಗಳಿಂದ ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಉನ್ನತ ಮಟ್ಟಕ್ಕೆ ತರಬೇಕಾದರೆ ಇವತ್ತು ಸಹಕಾರ ಚಳುವಳಿಯನ್ನು ಹಸಿರು ಕ್ರಾಂತಿಯ ರೂಪದಲ್ಲಿ ಹರಡಬೇಕಾಗಿದೆ. ಅದಕ್ಕಾಗಿ ಮೊಟ್ಟಮೊದಲು ಸಹಕಾರ ಸಂಘಗಳು ಚೆನ್ನಾಗಿ ಇರಬೇಕಾದರೆ, ಅದರಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿಗಳು, ಆಡಳಿತ ಮಂಡಳಿಗಳು ಒಳ್ಳೆಯ ರೀತಿಯಿಂದ, ಪ್ರಾಮಾಣಿಕವಾಗಿ, ಆತ್ಮಸಾಕ್ಷಿಯಿಂದ ಕೆಲಸ ಮಾಡಿದರೆ, ನಿಜವಾಗಿಯೂ ಸಹಕಾರ ಸಂಘಗಳು ಒಳ್ಳೆಯ ರೀತಿಯಿಂದ ನಡೆಯುತ್ತವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇವತ್ತು ಸಹಕಾರ ಸಂಘಗಳಲ್ಲಿ ಏನಾಗಿದೆ ಎಂದರೆ, ನಾನು ಮೊದಲು ಪತ್ರಿಕೆಗಳಲ್ಲಿ ಓದುತ್ತಿದ್ದೆ, ಸಹಕಾರ ಸಂಘ ಎಂದರೆ ಬಹಳ ಜನ ಸದಸ್ಯರು ವಿರೋಧ ಮಾಡುತ್ತಾರೆ. ಮೊನ್ನೆ ಕೂಡಾ ವಿರೋಧ ಪಕ್ಷದ ಉಪನಾಯಕರಾದ ಮಾನ್ಯ ಖಿರ್ಗಿಯವರು ಹೇಳುತ್ತಾ ಇದ್ದರು, ಇವರ ಒಂದು ಜಾತಿಯೇ ಬೇರೆ, ಸಹಕಾರ ರಂಗದಲ್ಲಿರುವವರೆಲ್ಲಾ ಒಂದೇ ಜಾತಿ ಎಂಬ ಮಾತನ್ನು ಪ್ರಸ್ತಾಪ ಮಾಡಿದರು. ಈಗಲೂ ಕೂಡಾ ಇವತ್ತು ನಾವು ಕೇಳುತ್ತಿದ್ದೇವೆ. ಸಹಕಾರ ಸಂಘದಲ್ಲಿ ಕೆಲಸ ಮಾಡತಕ್ಕವರು ಯಾರಿದ್ದಾರೆ, ಅವರೆಲ್ಲಾ ದೋಷಿಗಳು ಎನ್ನುವ ಮಾತೂ ಕೇಳಿಬರುತ್ತಿದೆ. ನಿಜವಾಗಿ ನೋಡಿದರೆ ಸಹಕಾರ ಸಂಘಗಳ ಬಗ್ಗೆ ಏತಕ್ಕೆ ಇಷ್ಟು ದ್ವೇಷ ಇದೆ ಎಂದು ಗೊತ್ತಾಗುತ್ತಿಲ್ಲ. ನಮ್ಮ ಆರ್ಥಿಕ ಪರಿಸ್ಥಿತಿ ಸರಿಯಾಗಬೇಕಾದರೆ, ದೇಶದ ಉದ್ಧಾರವಾಗಬೇಕಾದರೆ, ರೈತ ಉನ್ನತ ಮಟ್ಟಕ್ಕೆ ಬರಬೇಕಾದರೆ ಸಹಕಾರ ಚಳುವಳಿ ಬಹಳ ಮುಖ್ಯ. ಇದರಲ್ಲಿ ಕೆಲವು ಲೋಪದೋಷಗಳು ಇರಬಹುದು. ಯಾರು ತಪ್ಪು ಮಾಡುತ್ತಾರೆ, ಅವರಿಗೆ ಶಿಕ್ಷೆ ಕೊಡಬೇಕು, ಯಾರು ತಪ್ಪು ಮಾಡುವುದಿಲ್ಲ ಅವರೂ ಸಹ ತಪ್ಪಿತಸ್ಥರು, ಅವರೂ ಇಂಥವರು ಎನ್ನುವ ಮಾತು ಹೇಳುವುದು ತಪ್ಪು. ಸಹಕಾರ ಸಂಘ ಎಂದರೆ ಪವಿತ್ರವಾದ ಮಂದಿರ ಇದ್ದಹಾಗೆ. ಈ ಪವಿತ್ರವಾದ ಮಂದಿರಕ್ಕೆ ಹೋಗುವಾಗ ಈ ಕಡೆ ಪಕ್ಷವೇ ಇರಲಿ, ಆ ಕಡೆ ಪಕ್ಷವೇ ಇರಲಿ ಯಾವುದೇ ರಾಜಕೀಯ ಪಕ್ಷ ಇರಲಿ, ದೇವರ ಗುಡಿಗೆ ಹೋಗುವಾಗ ಯಾವರೀತಿ ಪಾದರಕ್ಷೆಯನ್ನು ಹೊರಗಡೆ ಬಿಟ್ಟು ಹೋಗುತ್ತಾರೆ,ಅದೇ ಪ್ರಕಾರ ಈ ಸಹಕಾರ ಚಳುವಳಿಗೆ ಹೋಗುವಾಗ, ಸಹಕಾರ ಸಂಘಗಳಿಗೆ ಹೋಗುವಾಗ ರಾಜಕೀಯವನ್ನು ಬದಿಗಿಟ್ಟು ಹೋದರೆ ಮಾತ್ರ ಅವು ಅಭಿವೃದ್ಧಿ ಯಾಗುತ್ತವೆ, ಸಹಕಾರ ಚಳುವಳಿ ಚೆನ್ನಾಗಿ ಆಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ಸೆಕ್ಷನ್ ೩೦(ಬಿ) ಏನಂ ಇದೆ ಇದು ನಿಜವಾಗಿಯೂ ಪ್ರಜಾಪ್ರಭುತ್ವದ ನೀತಿಗೆ ಅನುಗುಣವಾದುದಲ್ಲ. ಇದು ಏತಕ್ಕೆ ಬಂತು? ಇದರ ಹಿನ್ನೆಲೆ ಏನು ಎಂದರೆ, ೧೯೭೪ರಲ್ಲಿ ಅಥವಾ ಇದಕ್ಕಿಂತ ಮುಂಚೆ ಏನಾದರೂ ಹೆಚ್ಚು ಕಡಿಮೆ ಇರಬಹುದು, ಮಾನ್ಯ ರಂಗನಾಥ್‌ರವರು ಸಹಕಾರ ಮಂತ್ರಿ

ಗಳಾಗಿದ್ದಾಗ ಇದರ ಬಗ್ಗೆ ಒಂದು ತಿದ್ದುಪಡಿಯನ್ನು ತಂದರು. ಇದಕ್ಕೆ ಕಾರಣ, ಸಾಮಾಜಿಕವಾಗಿ, ಆರ್ಥಿಕವಾಗಿ, ಏನಾದರೂ ತೊಂದರೆ ಬಂದರೆ, ಈ ಸಹಕಾರ ಸಂಘಗಳ ಬೈಲಾ ತಿದ್ದುಪಡಿ ಮಾಡುವುದಕ್ಕೆ ಸರಕಾರಕ್ಕೆ ಅಧಿಕಾರ ಇರಬೇಕು ಎಂದು, ತಿದ್ದುಪಡಿ ತಂದರು. ಆ ಅಧಿಕಾರವನ್ನು ರಿಜಿಸ್ಟ್ರಾರ್‌ರವರಿಗೆ ಕೊಟ್ಟಿದ್ದರು. ಆಮೇಲೆ ೧೯೭೯ರಲ್ಲಿ ವೀರೇಶಪ್ಪ ಕಂಶನೂರ್‌ರವರು ಸಹಕಾರ ಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿ, ಈ ಅಧಿಕಾರ ಸರಕಾರಕ್ಕೇ ಇರಬೇಕು, ಇದನ್ನು ರಿಜಿಸ್ಟ್ರಾರ್‌ರವರಿಗೆ ಕೊಡಬಾರದು ಎನ್ನುವ ಮಾತೂ ಕೂಡಾ ಬಂತು. ಆಗ ವೀರೇಶಪ್ಪ ಕಂಶನೂರ್‌ರವರು ಇದರ ಬಗ್ಗೆ ತಿದ್ದುಪಡಿ ತಂದರು, ಇದೂ ಕೂಡಾ ಚರ್ಚೆಗೆ ಬಂತು. ಒಂದು ವಿಶೇಷವಾದಂಥ ಸಂದರ್ಭದಲ್ಲಿ ಮಾತ್ರ ಇದನ್ನು ಉಪಯೋಗ ಮಾಡಬೇಕು, ಆಗಾಗ್ಗೆ ಇದನ್ನು ಉಪಯೋಗ ಮಾಡಕೂಡದು ಎಂಬ ವಿಚಾರವನ್ನು ಸಭೆಯಲ್ಲಿ ಒಪ್ಪಿದರು.

ಈಗ ಈ ಸೆಕ್ಷನ್ 30 (ಬಿ) ಕಾಯ್ದೆ ಏನಿದೆ ಅದನ್ನು ತಾವು ಡಿಲೀಟ್ ಮಾಡಬೇಕು. ಇಲ್ಲದಿದ್ದರೆ ಅದು ತಪ್ಪಾಗುತ್ತದೆ. ಆದ್ದರಿಂದ ದಯಮಾಡಿ ತಾವು ಈ ಕಾಯ್ದೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಮಾನ್ಯ ಸಹಕಾರ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಗ್ರಾಮಾಂತರ ಸಹಕಾರ ಸಂಘಗಳಿಗೂ ಬ್ಯಾಂಕ್‌ಗಳಿಗೂ ಬಹಳ ವ್ಯತ್ಯಾಸಗಳು ಇವೆ. ಸಹಕಾರ ಸಂಘಗಳ ವ್ಯವಹಾರಗಳಿಗೂ ಬ್ಯಾಂಕ್‌ಗಳ ವ್ಯವಹಾರಗಳಿಗೂ ಕೋಟ್ಯಾಂತರ ರೂಪಾಯಿಗಳ ವ್ಯತ್ಯಾಸಗಳು ಇವೆ. ಸಹಕಾರ ಸಂಘದವರು ಒಂದು ರೀತಿಯ ಬಡ್ಡಿಯನ್ನು ವಸೂಲಿ ಮಾಡುತ್ತಾರೆ. ಬ್ಯಾಂಕ್‌ಗಳ ಒಂದು ರೀತಿಯ ಬಡ್ಡಿಯನ್ನು ವಸೂಲಿ ಮಾಡುತ್ತಿವೆ. ಅಪೆಕ್ಸ್ ಬ್ಯಾಂಕ್‌ನವರು ಒಂದು ರೀತಿಯಾದಂಥ ಬಡ್ಡಿಯನ್ನು ವಸೂಲಿ ಮಾಡುತ್ತಾರೆ. ಡಿ.ಸಿ.ಸಿ. ಬ್ಯಾಂಕ್‌ನವರು ಒಂದು ರೀತಿಯಾದಂಥ ಬಡ್ಡಿಯನ್ನು ವಸೂಲಿ ಮಾಡುತ್ತಾರೆ. ಅಫೆಕ್ಸ್ ಬ್ಯಾಂಕ್‌ನವರು ಬಡ್ಡಿಯನ್ನು ಪ್ರತಿ ಮೂರು ತಿಂಗಳಿಗೊಂದು ಸಾರಿ ವಸೂಲಿ ಮಾಡಿರುತ್ತಾರೆ ಈ ಸಹಕಾರ ಸಂಘದವರು ಒಂದು ವರ್ಷಕ್ಕೆ ಒಂದು ಸಾರಿ ಬಡ್ಡಿಯನ್ನು ವಸೂಲಿ ಮಾಡುತ್ತಾರೆ. ಇದರಿಂದ ಸಹಕಾರಿ ಸಂಘಗಳು ನಷ್ಟದಲ್ಲಿ ನಡೆಯುವುದಕ್ಕೆ ಕಾರಣ ವಾಗುತ್ತವೆ. ಇದನ್ನು ತಪ್ಪಿಸಿ ಮಾನ್ಯ ಸಹಕಾರಿ ಸಚಿವರು ಏನಾದರೂ ಹೊಸ ಉಪಾಯವನ್ನು ಕಂಡು ಹಿಡಿಯಬೇಕೆಂದು ನಾನು ಸಲಹೆ ಮಾಡುತ್ತೇನೆ. ಈ ಸಹಕಾರಿ ಸಂಘಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವ ದೃಷ್ಟಿಯಿಂದ ಏನಾದರೂ ಯೋಚನೆ ಮಾಡಬೇಕು. ಕಮರ್ಷಿಯಲ್ ಬ್ಯಾಂಕ್‌ಗಳ ರೀತಿ ಇಲ್ಲಿಯೂ ಸಹ ಪ್ರತಿ ಮೂರು ತಿಂಗಳಿಗೆ ಒಂದು ಸಾರಿ ಬಡ್ಡಿಯನ್ನು ವಸೂಲಿ ಮಾಡಿದರೆ ಒಳ್ಳೆಯದು. ಇದಲ್ಲದೆ ಸಹಕಾರಿ ಸಂಘಗಳವರು 7 ಪರ್ಸೆಂಟ್ ಸಬ್ಸಿಡಿಯನ್ನು ಕೊಡುತ್ತಿದ್ದಾರೆ. ಈ ಸಬ್ಸಿಡಿ ಹಣ ಪೂರ್ಣ ಪಾಲನ್ನು ಸರ್ಕಾರದವರು ಸಹಕಾರಿ ಸಂಘಗಳಿಗೆ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈಗ ಸಬ್ಸಿಡಿ ಹಣವನ್ನು ಸರ್ಕಾರದವರು ಒಂದು ವರ್ಷದ ನಂತರ ಕೊಡುತ್ತಾರೆ. ಇದನ್ನು ತಪ್ಪಿಸಿ ತಕ್ಷಣ ಆ ಸಬ್ಸಿಡಿ ಹಣ ಸಹಕಾರಿ ಸಂಘಗಳಿಗೆ ಸಿಗುವಂತಾಗಲು ಕ್ರಮ ತೆಗೆದುಕೊಳ್ಳಲು ನಾನು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಬಗ್ಗೆ ಮತ್ತು ಮಹಾಮಂಡಲಿಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ನಮ್ಮ ರಾಜ್ಯದಲ್ಲಿರುವ ಎಲ್ಲಾ ಸಹಕಾರಿ ಸಂಘಗಳು ಬಹಳ ನಷ್ಟದಲ್ಲಿ ನಡೆಯುತ್ತಿವೆ, ಲಾಭದಾಯಕವಾಗಿ ನಡೆಯುತ್ತಿಲ್ಲ, ಇತ್ಯಾದಿ ರೀತಿಯ ಆರೋಪಗಳು ಇವೆ. ಉದಾಹರಣೆಯಾಗಿ ನಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಜನತಾ ಬಜಾರುಗಳ ಮಹಾಮಂಡಲಿಯನ್ನೇ ತೆಗೆದುಕೊಳ್ಳಿ. ಈ ಮಹಾಮಂಡಲಿಗಳು ಈ ಹಿಂದೆ ಸಾಕಷ್ಟು ನಷ್ಟದಲ್ಲಿ ಇದ್ದವು. ಈಗ ಆ ಪರಿಸ್ಥಿತಿ ಇಲ್ಲ. ಈ ಜನತಾ ಬಜಾರುಗಳಲ್ಲಿ ಒಳ್ಳೆಯ ಕೆಲಸ ಮಾಡಿ 17-18 ಲಕ್ಷ ರೂಪಾಯಿಗಳ ಲಾಭ ಸಂಪಾದನೆ ಮಾಡಿದ್ದಾರೆಂದು ತಾವು ತಮ್ಮ ವರದಿಯಲ್ಲಿ ತಿಳಿಸಿದ್ದೀರಿ. ಅದೇ ರೀತಿಯಲ್ಲಿ ಈ ಜನತಾ ಬಜಾರುಗಳಲ್ಲಿ ಬಟ್ಟೆಯ ವಹಿವಾಟು ಮೂಲಕ 51 ಲಕ್ಷ ರೂಪಾಯಿಗಳ ಲಾಭ ಸಂಪಾದನೆ ಮಾಡಿದ್ದಾರೆ. ಲಾಭದಲ್ಲಿ 15 ಲಕ್ಷರೂ ಮುಖ್ಯ ಮಂತ್ರಿಗಳ ನಿಧಿಗೆ ಕೊಟ್ಟಿದ್ದಾರೆ 22ಸಾವಿರ ಬಟ್ಟೆಯನ್ನು ಉಳಿಸಿ 22 ಲಕ್ಷ. ರೂ ಸರಕಾರಕ್ಕೆ ವಾಪಸ್ಸು ಕೊಟ್ಟಿದ್ದಾರೆ. ಇದು ಸ್ಮರಣೀಯ ಮಾತು ಈ ರೀತಿ ಈ ಬೇರೆಯ ಸಹಕಾರ ಸಂಘಗಳಲ್ಲಿ ಕೂಡ ಚಲೋ ಕೆಲಸ ಮಾಡುವ ರೀತಿಯಲ್ಲಿ ಏನಾದರೂ ವ್ಯವಸೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಒಂದು ಮಾತನ್ನು ನಾನು ಈ ಸದನದಲ್ಲಿ ಮಾನ್ಯ ಸಚಿವರ ಗಮನಕ್ಕೆ ತರುವುದಾದರೆ ಸಹಕಾರ ಸಂಘಗಳಿಗೆ ಟರ್ನ್‌ಓವರ್ ಟ್ಯಾಕ್ಸ್ ಇರಬಾರದು. ಈ ಸಹಕಾರ ಸಂಘಗಳಲ್ಲಿ ವ್ಯವಹಾರವೇನೂ ಮಾಡುವುದಿಲ್ಲ.

ಈಗ ಈ ಟರ್ನ್‌ಓವರ್ ಟ್ಯಾಕ್ಸ್ ಒಂದೂವರೆ ಪರ್ಸೆಂಟ್‌ನಿಂದ ಎರಡೂವರೆ ಪರ್ಸೆಂಟ್ ಆಗಿದೆ. ಇದರಲ್ಲಿ ಮಾರಾಟ ತೆರಿಗೆ ೩ ಪರ್ಸೆಂಟ್ ಸೇರಿ ಒಟ್ಟು ೫ ಪರ್ಸೆಂಟ್ ಟ್ಯಾಕ್ಸ್ ಕೊಡಬೇಕಾಗುತ್ತದೆ. ಸಹಕಾರ ಸಂಘದವರಿಂ ಏನಾಗಿ ವ್ಯವಹಾರವನ್ನೂ ಮಾಡುವುದಿಲ್ಲ. ಆದ್ದರಿಂದ ನನ್ನ ದೃಷ್ಟಿಯಲ್ಲಿ ಸಹಕಾರ ಸಂಘಗಳಿಗೆ ಟರ್ನ್‌ಓವರ್ ಟ್ಯಾಕ್ಸ್ ಇರಬಾರದು. ಇದನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕು. ಈ ಸಹಕಾರಿ ಸಂಘಗಳು ಮಾರುಕಟ್ಟೆಯಲ್ಲಿ ಕಾಂಪೀಟ್ ಮಾಡುವುದಕ್ಕೆ ಆಗುವುದಿಲ್ಲ.

ಇವೊತ್ತಿನ ದಿವಸ ರಾಜ್ಯದಲ್ಲಿರುವ ಅನೇಕ ಸಕ್ಕರೆ ಕಾರ್ಖಾನೆಗಳು ಲಾಕ್ಸ್‌ನಿನಲ್ಲಿ ನಡೆಯುತ್ತಿವೆ. ಇನ್ನು ಮುಂದೆ ಹೊಸದಾಗಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ತಾವು ಅವಕಾಶ ಕೊಡಬಾರದೆಂಬ ನೀತಿ ಮಾಡಿದ್ದೀರೆಂದು ನಾನು ಕೇಳಿದ್ದೇನೆ. ನಮ್ಮ ಬೀದರ್ ಜಿಲ್ಲೆಯಲ್ಲಿ ನಾರಂಜ ಶುಗರ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಬೇಕೆಂದು ರಿಜಿಸ್ಟರ್ ಮಾಡಿಸಿ ಮೂರು, ನಾಲ್ಕು ವರ್ಷ ಗಳಾಯಿತು. ಈ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೋಸ್ಕರ ನಮ್ಮ ಜಿಲ್ಲೆಯಲ್ಲಿ ೮೭ ಲಕ್ಷ ರೂಪಾಯಿಗಳಷ್ಟು ಹಣವನ್ನು ಷೇರ್ ಮೂಲಕ ಈಗಾಗಲೇ ಸಂಗ್ರಹಿಸಲಾಗಿದೆ. ಆದರೆ ಕೇಂದ್ರ ಸರ್ಕಾರದವರು ಏನು ಹೇಳುತ್ತಾರೆ ಎಂದರೆ, ಬೀದರ್ ಜಿಲ್ಲೆಯಲ್ಲಿ ಶುಗರ್‌ಕೇನ್ ಹೆಚ್ಚಿಗೆ ಬೆಳೆಯುವುದಿಲ್ಲವಾದ್ದರಿಂದ ಇಲ್ಲಿ ಶುಗರ್ ಫ್ಯಾಕ್ಟರಿಗೆ ಲೈಸನ್ಸ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ನಾನು ಹೇಳುತ್ತೇನೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಹೋದ ವರ್ಷ ೪೫ ಸಾವಿರ ಎಕರೆಯಲ್ಲಿ ಕಬ್ಬನ್ನು ಬೆಳೆಯಲಾಗಿತ್ತು. ಈ ವರ್ಷ ೫೪ ಸಾವಿರ ಎಕರೆಯಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದೆ. ಈ ೫೪ ಸಾವಿರ ಎಕರೆ ಜಮೀನಿನಲ್ಲಿ ಸುಮಾರು ೧೩ ಲಕ್ಷ ಟನ್ ಕಬ್ಬನ್ನು ಬೆಳೆಯಬಹುದಾಗಿದೆ, ಈಗಾಗಲೇ ಬೀದರ್‌ನಲ್ಲಿರುವ ಒಂದು ಶುಗರ್ ಕಂಪನಿಯಂ ಮೂರುವರೆ ಲಕ್ಷ ಟನ್ ಕಬ್ಬನ್ನು ಕ್ರಷ್ ಮಾಡುತ್ತಿದೆ. ಇದರ ಜೊತೆಗೆ ಬೀದರ್ ಜಿಲ್ಲೆಯಲ್ಲಿ ೧೧ ಖಂಡಸಾರಿ ಕಾರ್ಖಾನೆಗಳು ಇವೆ. ಈ ೧೧ ಖಂಡಸಾರಿ ಕಾರ್ಖಾನೆಗಳು ಸುಮಾರು ಎರಡೂವರೆ ಲಕ್ಷ ಟನ್ ಕಬ್ಬನ್ನು ಬೆಲ್ಲ ಮಾಡುವುದಕ್ಕೆ ಅರಿಯುತ್ತಿವೆ ಇಷ್ಟೆಲ್ಲಾ ಖಂಡಸಾರಿ ಕಾರ್ಖಾನೆಗಳು ಇದ್ದರೂ ಸಹ ರೈತರು ಬೆಳೆದ ಕಬ್ಬು ಇನ್ನೂ ೪ ಲಕ್ಷ ಟನ್ ಹಾಗೆಯೇ ಇರುತ್ತದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ರೈತರುಗಳು ಬೆಳೆದ ಕಬ್ಬು ಎಲ್ಲಿಗೆ ಹೋಗಬೇಕು? ಬೀದರ್ ಜಿಲ್ಲೆಗೆ ಇನ್ನೂ ಬಂದು ಶುಗರ್ ಫ್ಯಾಕ್ಟರಿಯನ್ನು ಕೊಡಿ ಎಂದು ಕೇಂದ್ರ ಸರ್ಕಾರದವರು ಕೇಳಿದರೆ, ಬೀದರ್ ಜಿಲ್ಲೆಯಲ್ಲಿ ಸಾಕಷ್ಟು ಕಬ್ಬು ಬೆಳೆಯುತ್ತಿಲ್ಲವೆಂದು ಹೇಳುತ್ತಾರೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಎಷ್ಟು ಕಬ್ಬನ್ನು ಬೆಳೆಯಲಾಗುತ್ತದೆ. ಎಂಬ ಬಗ್ಗೆ ನಾನೇ ಸ್ವತಃ ಸರ್ವೆ ಮಾಡಿಸಿದ್ದೇವೆ. ನಾನು ಮಾಡಿಸಿದ ಸರ್ವೆ ಪ್ರಕಾರ ಈ ಅಂಕಿ ಅಂಶಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಅಂಕಿ ಅಂಶಗಳನ್ನು ಗಮನಿಸಿ ಬೀದರ್ ಜಿಲ್ಲೆಯಲ್ಲಿ ಇನ್ನೊಂದು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಲೆಟರ್ ಆಫ್ ಇಂಟೆಂಟ್ ಕೊಡಬೇಕೆಂದು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಸ್ವಲ್ಪ ಮುತುವರ್ಜಿ ವಹಿಸಿ ಬೀದರ್ ಜಿಲ್ಲೆಗೆ ಇನ್ನೊಂದು ಸಕ್ಕರೆ ಕಾರ್ಖಾನೆಗೆ ಲೆಟರ್ ಆಫ್ ಇಂಟೆಂಟ್ ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ರೈತರುಗಳಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ೩ಲಕ್ಷ ಟನ್ ಕಬ್ಬನ್ನು ಮಹಾರಾಷ್ಟ್ರಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಕಳುಹಿಸುವ ಏರ್ಪಾಡನ್ನು ಮಾಡಿದ್ದೇನೆ. ಮಹಾರಾಷ್ಟ್ರದಲ್ಲಿ ೧೬ ಲಕ್ಷ ರೂಪಾಯಿಗಳನ್ನು ಷೇರ್ ಕಲೆಕ್ಟ್ ಮಾಡಿರುವವರಿಗೂ ಸಕ್ಕರೆ ಕಾರ್ಖಾನೆಗೆ ಲೈಸನ್ಸ್ ಕೊಟ್ಟಿದ್ದಾರೆ ೧೩ ಲಕ್ಷ ರೂಪಾಯಿಗಳನ್ನು ಷೇರ್ ಕಲೆಕ್ಟ್ ಮಾಡಿರುವವರಿಗೂ ಸಕ್ಕರೆ ಕಾರ್ಖಾನೆ ಮಾಡುವುದಕ್ಕೆ ಲೈಸನ್ಸ್ ಕೊಟ್ಟಿದ್ದಾರೆ ನಮ್ಮ ಬೀದರ್ ಜಿಲ್ಲೆಯಲ್ಲಿ ನಾವು ೮೭ ಲಕ್ಷ ರೂಪಾಯಿಗಳ ಷೇರ್ ಕಲೆಕ್ಟ್ ಮಾಡಿದ್ದರೂ ಸಹ ಸಕ್ಕರೆ ಕಾರ್ಖಾನೆಗೆ ಒಪ್ಪಿಗೆ ಕೊಡುತ್ತಿಲ್ಲ. ಏಕೆ ಈ ರೀತಿ ಕೇಂದ್ರ ಸರ್ಕಾರದವರು ಮಾಡುತ್ತಿದ್ದಾರೊ ನಮಗೆ ಗೊತ್ತಾಗುತ್ತಿಲ್ಲ. ಇವರ ಉದ್ದೇಶ ಏನು? ನಮ್ಮ ರೈತರು ಬಹಳ ತೊಂದರೆಯಲ್ಲಿ ಇದ್ದಾರೆ ಇದು ಬಹಳ ಮಹತ್ವಪೂರ್ಣವಾದ ವಿಚಾರ. ರೈತನ ಆರ್ಥಿಕ ಪರಿಸ್ಥಿತಿ ಬಗ್ಗೆ ವಿಚಾರ ಮಾಡಿ ಮಾನ್ಯ ಸಹಕಾರ ಸಚಿವರು ಕೇಂದ್ರ ಸರ್ಕಾರಕ್ಕೆ ಒತ್ತಡ ತಂದು ಬೀದರ್ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಯನ್ನು ತೆರೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಮಾನ್ಯ ಸಚಿವರು ತೀವ್ರವಾಗಿ ಇದರ ಬಗ್ಗೆ ಗಮನಹರಿಸ ಬೇಕು. ಇನ್ನು ಪಿ ಎಲ್.ಡಿ. ಬ್ಯಾಂಕುಗಳ ಗತಿ ಏನಾಗಿದೆ ಎಂದರೆ, ಅಲ್ಲಿ ವಸೂಲಾತಿ ಆಗುತ್ತಿಲ್ಲ. ಈ ವರ್ಷ ನಮ್ಮ ಬೀದರ್ ಜಿಲ್ಲೆಯಲ್ಲಿ ಭೀಕರ ಬರಗಾಲ ಬಂದಿತ್ತು. ಹಿಂದಿನ ೩೦ ವರ್ಷಗಳಿಂದಲೂ

ಇಂಥ ಬರಗಾಲ ಬಂದಿರಲಿಲ್ಲವೆಂದು ನೋಡಿದವರು ಹೇಳುತ್ತಾರೆ. ಔರಾದ್ ತಾಲ್ಲೂಕಿನಲ್ಲಿ ಬರಗಾಲ ಬಹಳ ಬಂದಿದ್ದರಿಂದ ೧೪೯ ಹಳ್ಳಿಗಳಲ್ಲಿ ತಹಲಿ ಮತ್ತು ಸಾಲವನ್ನು ಪೂರ್ತಿ ಮನ್ನಾ ಮಾಡಬೇಕೆಂದು ರಿಪೋರ್ಟ್ ಕೊಡಲಾಗಿದೆ. ಅದೇ ರೀತಿ ಬೀದರ್‌ನ ೩೫ ಹಳ್ಳಿಗಳಲ್ಲಿ ಸಾಲವನ್ನು ಸಸ್‌ಪೆಂಡ್ ಮಾಡ ಬೇಕೆಂದು, ಬಸವಕಲ್ಯಾಣದಲ್ಲಿ ೬೮ ಹಳ್ಳಿಗಳಲ್ಲಿ ಮನ್ನಾ ಮಾಡಬೇಕೆಂದು ೧೯ ಹಳ್ಳಿಗಳಲ್ಲಿ ಸಾಲವನ್ನು ವಸೂಲಿ ಮಾಡುವುದನ್ನು ಮುಂದೆ ಹಾಕಬೇಕೆಂದೂ, ಭಾಲ್ಕಿ ತಾಲ್ಲೂಕಿನಲ್ಲಿ ೨೦ ಹಳ್ಳಿಗಳಲ್ಲಿ ಸಾಲವನ್ನು ಮನ್ನಾ ಮಾಡಬೇಕೆಂದು ೬೦ ಹಳ್ಳಿಗಳಲ್ಲಿ ಸಾಲವನ್ನು ವಸೂಲಿ ಮಾಡುವುದನ್ನು ಮುಂದೆ ಹಾಕ ಬೇಕೆಂದು ರಿಪೋರ್ಟ್ ಕೊಡಲಾಗಿದೆ. ಬೀದರ್ ಜಿಲ್ಲೆಯಲ್ಲಿ ಒಟ್ಟು ೩೫೯ ಹಳ್ಳಿಗಳು ಬರಗಾಲಕ್ಕೆ ಸಿಕ್ಕಿವೆ. ಕುಡಿಯುವ ನೀರಿಗಾಗಿ ಜನರು ಹತ್ತು ಕಿಲೋಮೀಟರ್ ದೂರ ಹೋದರೂ ಸಹ ನೀರು ಸಿಗುವುದಿಲ್ಲ. ಬೀದರ್‌ನಲ್ಲಿ ನೀರಿನ ಪರಿಸ್ಥಿತಿ ಬಹಳ ಭಯಂಕರವಾಗಿದೆ. ಇದರ ಬಗ್ಗೆ ಸರ್ಕಾರ ತೀವ್ರವಾಗಿ ಯೋಚನೆ ಮಾಡಬೇಕಾಗಿದೆ,

ನಮ್ಮ ಜನರು ಕುಡಿಯುವ ನೀರಿಗಾಗಿ ೩-೪ ಕಿ.ಮೀ. ಗಳಷ್ಟು ದೂರ ಹೋಗಬೇಕಾಗುತ್ತದೆ. ನಾನು ಕೆಲವು ಹಳ್ಳಿಗಳಲ್ಲಿ ನೋಡಿದ್ದೇನೆ, ಅಲ್ಲಿಯ ಜನರ ನೀರಿನ ಬವಣೆಯನ್ನು, ತಾವು ಸ್ನಾನ ಮಾಡು ವಾಗ ಮಂಚದ ಕೆಳಗೆ ಪಾತ್ರೆ ಇಟ್ಟುಕೊಂಡು ಸ್ನಾನ ಮಾಡುತ್ತಾರೆ, ಅನಂತರ ಅದೇ ನೀರನ್ನು ಬಟ್ಟೆ ಒಗೆಯಲಿಕ್ಕೆ ಉಪಯೋಗಿಸುತ್ತಾರೆ. ಇಂತಹ ಒಂದು ಕಷ್ಟ ಪರಿಸ್ಥಿತಿಯಲ್ಲಿ ಅವರಿಗೆ ಇರುವ ಆರ್ಥಿಕ ಪರಿಸ್ಥಿತಿಯನ್ನೂ ಉತ್ತಮಗೊಳಿಸುವತ್ತ ನಾವು ಚಿಂತನೆ ಮಾಡಬೇಕಾಗಿದೆ. ನಾವು ಅವರಿಗೆ ಯಾವ ರೀತಿಯಲ್ಲಿ ಸಹಾಯವನ್ನು ಮಾಡಬೇಕು, ಯಾವ ರೀತಿಯಲ್ಲಿ ಸಾಲ ಸೌಲಭ್ಯವನ್ನು ಕೊಡ ಬೇಕೆಂಬುದರ ಬಗ್ಗೆ ಚಿಂತನೆ ಮಾಡಬೇಕು. ಈ ದಿಸೆಯಲ್ಲಿ ಅವರ ಆರ್ಥಿಕ ಸ್ಥಿತಿಗತಿಗಳನ್ನು ಉನ್ನತ ಮಟ್ಟಕ್ಕೆ ತರುವುದು ಹೇಗೆ, ಮತ್ತು ಅವರನ್ನು ಕಷ್ಟದಿಂದ ಬಿಳಿಸುವುದು ಹೇಗೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ಅವರಿಗೆ ಸಹಕಾರ ಸಂಘಗಳ ಮೂಲಕ ಸಾಲವನ್ನು ಕೊಡುವುದಕ್ಕೆ ಸಾಧ್ಯವೇ ಅಥವಾ ಯಾವುದೇ ಇತರ ಸಾಲಗಳನ್ನು ಕನ್‌ವರ್ಷನ್ ಮಾಡಿ ಕೊಡುವುದಕ್ಕೆ ಸಾಧ್ಯವೇ ಎಂಬ ಬಗ್ಗೆ ನೋಡಬೇಕು. ಇವೊತ್ತು ಕೂಲಿಗಾರರು ಇದ್ದಾರೆ, ಅವರ ಪಾಡು ಬೇರೆ ರೀತಿಯಲ್ಲಿದೆ, ಅವರಿಗಿಂತಲೂ ಕೆಳಮಟ್ಟದಲ್ಲಿ ಈ ಬಡರೈತರು ಇದ್ದಾರೆ, ಇವರಿಗೂ ಹೆಂಡತಿಮಕ್ಕಳು ಮತ್ತು ದನಗಳೂ ಇದ್ದಾರೆ, ಇವರಿಗೆ ಬೇರೆ ಯಾವ ಮೂಲಗಳೂ ಸಹಾಯವನ್ನು ಕಲ್ಪಿಸಿಲ್ಲ. ಅಂತಹವರು ಇವೊತ್ತು ಎಲ್ಲಿಗೆ ಹೋಗಬೇಕು ? ಅವರ ಗತಿ ಏನಾಗಬೇಕು ? ಅದಕ್ಕಾಗಿ ವಿಶೇಷವಾದಂತಹ ಏನಾದರೂ ಒಂದು ಕಾನೂನನ್ನು ತಂದು, ಅವರಿಗೆ ಸಹಾಯವಾಗತಕ್ಕಂಥ ಸಾಲವನ್ನು ಸಹಕಾರ ಸಂಘಗಳ ಮೂಲಕವೇ ಮಾಡಲಿ, ಅಥವಾ ಬೇರೆ ಯಾವ ಬ್ಯಾಂಕ್‌ಗಳ ಮೂಲಕವೇ ಮಾಡಲಿ. ಅಥವಾ ಇನ್ನಾವುದೇ ರೀತಿ ಯಿಂದಲೂ ಮಾಡಲಿ. ಒಟ್ಟಿನಲ್ಲಿ ಆ ನೊಂದ ಜನರಿಗೆ, ಬರಗಾಲದಿಂದ, ಕಂಗಾಲಾದ ಜನರಿಗೆ ಸಹಾಯವನ್ನು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈ ಒಂದು ವಿಷಯ ಸರಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅಲ್ಲಿನ ತಹಶೀಲ್ದಾರರು ಈ ಬಗ್ಗೆ ವರದಿಯನ್ನು ಕಳುಹಿಸಿದ್ದಾರೆ, ಜಿಲ್ಲಾಧಿಕಾರಿಗಳು ಕಳುಹಿಸಿದ್ದಾರೆ, ಡಿವಿಜನಲ್ ಕಮೀಷನರ್‌ರವರಿಗೆ ಹೋಗಿದೆ, ಆದರೆ ಇಲ್ಲಿಯ ತನಕ ಸರ್ಕಾರಕ್ಕೆ ಬಂದಿದೆಯೋ ಇಲ್ಲವೋ ತಿಳಿದಿಲ್ಲ. ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ಸಹಕಾರ ಸಂಘಗಳನ್ನು ನಾವು ಟೀಕೆ ಮಾಡುವುದು ಒಂದೇ ಮಾಡ ಬಾರದು. ಸಹಕಾರ ಸಂಘಗಳು ಎಷ್ಟೋ ಒಳ್ಳೆಯ ಕೆಲಸಗಳನ್ನೂ ಮಾಡಿವೆ. ಅಂತಹವುಗಳನ್ನು ನಾವು ಸ್ಮರಿಸಿಕೊಳ್ಳಬೇಕು. ಎಲ್ಲಿ ಯಾವ ರೈತನಿಗೆ ಪಡೆದ ಸಾಲವನ್ನು ಹಿಂದಿರುಗಿ ಕೊಡುವುದಕ್ಕೆ ಆಗುತ್ತಿರಲಿಲ್ಲವೋ, ಆ ಜನರು ಬಡ್ಡಿಯನ್ನು ಮನ್ನಾ ಮಾಡಿದ ಮೇಲೆ ತಮ್ಮ ಸಂಧಾರಿಸಿದ ಆರ್ಥಿಕ ಪರಿಸ್ಥಿತಿಯಿಂದಾಗಿ ಸಾಲವನ್ನು ಪುನರ್‌ಪಾವತಿ ಮಾಡುತ್ತಿದ್ದಾರೆ. ಈ ಹಿಂದೆ ಮೂವತ್ತು ವರ್ಷಗಳ ಕಾಲದಲ್ಲಿ ಅವರು ಸಾಲವನ್ನು ತಿರುಗಿ ಕೊಡುವಂತಹ ಒಂದು ಪರಿಸ್ಥಿತಿಯಲ್ಲಿರಲಿಲ್ಲ. ಈಗ ಅದು ಉಳಿದಿಲ್ಲ, ಸ್ವಲ್ಪ ಚೆನ್ನಾಗಿ ಆಗಿದೆ. ಮನೆಗಳನ್ನು ಮಾರಿದರೂ ಪುನರ್‌ಪಾವತಿ ಮಾಡುವ ಸ್ಥಿತಿಯಲ್ಲಿಲ್ಲದ ರೈತರು ಈಗ ಚೇತರಿಸಿಕೊಂಡಿದ್ದಾರೆ. ಅವರಿಗೆ ಬಡ್ಡಿಯನ್ನು ಮನ್ನಾ ಮಾಡಿದ್ದರಿಂದ ಅನುಕೂಲ ವಾಗಿದೆ. ಇದೊಂದು ಒಳ್ಳೆಯ ಕೆಲಸವಾಗಿದೆ. ಅಂತೆಯೇ ವಿಫಲವಾದಂತಹ ಭಾವಿಗಳಿಗೆ ಪಡೆದ ಸಾಲದ ವಿಚಾರದಲ್ಲಿಯೂ ಕೂಡ ಬಡ್ಡಿಮನ್ನಾ ಮಾಡಿದ್ದು ಅನುಕೂಲವಾಗಿದೆ. ಇಂತಹ ಕ್ರಮಗಳನ್ನು ಸರಕಾರ ತೆಗೆದುಕೊಂಡಿದ್ದುದು ಬಹಳ ಒಳ್ಳೆಯ ಕಾರ್ಯ ಮಾಡಿದೆ. ಅದಕ್ಕಾಗಿ ನಾವು ಸರಕಾರವನ್ನು ಪ್ರಸಂಶೆ ಮಾಡಬೇಕಾಗಿದೆ.

ಈಗ ಮಾರ್ಕೆಟಿಂಗ್ ಸೊಸೈಟಿಗಳ ಪರಿಸ್ಥಿತಿ ತುಂಬಾ ಕೆಟ್ಟು ಹೋಗಿದೆ. ಕೆಲವು ಕಡೆಗಳಲ್ಲಿ ಇವರು ಬಾಗಿಲು ಮುಚ್ಚಿಕೊಂಡು ಹೋಗಿದ್ದಾರೆ. ಅಂತಹ ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅದಕ್ಕಾಗಿ ತ್ರೀಟೈಯರ್ ಸಿಸ್ಟಮ್‌ನ್ನು ಜಾರಿಗೆ ತರಬೇಕು. ಗೊಬ್ಬರ ಇತ್ಯಾದಿಗಳನ್ನು ಸಹಕಾರ ಸಂಘಗಳ ಮೂಲಕ ಡೈರೆಕ್ಟ್ ಆಗಿ ಕೊಡುವುದು ಬೇಡ, ಅವುಗಳನ್ನು ಮಾರ್ಕೆಟಿಂಗ್ ಸೊಸೈಟಿಗಳ ಮೂಲಕ ಕೊಡುವಂತಹ ವ್ಯವಸ್ಥೆಯಾಗಬೇಕೆಂದು ಕೇಳಿಕೊಳ್ಳುತ್ತೇನೆ. ಅಂದರೆ ಹೀಗೆ ತ್ರಿಟೈಯರ್ ಸಿಸ್ಟಮ್ ಮಾಡಿದರೆ ಈ ಮಾರ್ಕೆಟಿಂಗ್ ಸೊಸೈಟಿಗಳು ಉಳಿಯುತ್ತವೆ, ಇಲ್ಲದಿದ್ದರೆ ಇಲ್ಲ, ಎಲ್ಲಿಯವರೆಗೆ ರೈತನಿಗೆ ಅನುಕೂಲತೆಗಳನ್ನು ನಾವು ಮಾಡಿಕೊಡುವುದಿಲ್ಲವೋ, ಅವರು ಬೆಳೆದ ಬೆಳೆಗೆ ಒಳ್ಳೆಯ ಬೆಲೆಯನ್ನು ಕೊಡುವುದಿಲ್ಲವೋ, ಅಲ್ಲಿಯ ತನಕ ರೈತರ ಸ್ಥಿತಿಗತಿಗಳು ಉನ್ನತ ಮಟ್ಟಕ್ಕೆ ಬರುವುದಿಲ್ಲ. ಅದಕ್ಕಾಗಿ ಮಾರ್ಕೆಟಿಂಗ್ ಸೊಸೈಟಿಗಳ, ಗ್ರಾಹಕರ ಸಹಕಾರ ಸಂಘಗಳ ಬಗ್ಗೆ ಬಹಳ ಪ್ರೋತ್ಸಾಹ ಕೊಡಬೇಕು. ಅದರ ಮೂಲಕ ಮಾತ್ರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಿಕೊಳ್ಳಲು ಸಾಧ್ಯ. ಆ ದಿಸೆಯಲ್ಲಿ ಯೋಚನೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಸಹಕಾರ ಸಂಘಗಳ ಬಗ್ಗೆ, ಸಹಕಾರ ಇಲಾಖೆಯಲ್ಲಿನ ವಿವಿಧ ಕೆಲಸಗಳನ್ನು, ಮಾನ್ಯ ಜಾಲಪ್ಪನವರು ತುಂಬಾ ಚೆನ್ನಾಗಿ ನಿರ್ವಹಿಸುತ್ತಿದ್ದಾರೆ. ಅನೇಕ ಯೋಜನೆಗಳನ್ನು ಹೊಸದಾಗಿ ಹಾಕಿಕೊಂಡು ಜಾರಿಗೆ ತರುತ್ತಿದ್ದಾರೆ. ಆದರೂ ಕೂಡ ನಮ್ಮಲ್ಲಿ ಏನಾಗಿದೆ ಎಂದರೆ, ಕೆಲವು ಜನರು ಮಾರ್ಕೆಟ್ಟಿಗೆ ನೇರವಾಗಿ ಹೋಗಿ ಮಾರುತ್ತಾರೆ, ಅವರು ಮಾರ್ಕೆಟಿಂಗ್ ಸೊಸೈಟಿಗಳ ಮೂಲಕ ತಮ್ಮ ಬೆಳೆಗಳನ್ನು ಮಾರಿದರೆ, ಸರಕಾರಕ್ಕೆ ೨ ಪರ್ಸೆಂಟ್ ಹಣ ಉಳಿತಾಯ ಕೂಡ ಆಗುತ್ತದೆ. ರೈತರಿಗೂ ಅನೇಕ ಸೌಲಭ್ಯಗಳು ಸಿಗುತ್ತವೆ ಇದು ರೈತರಿಗೆ ತಿಳಿಯುವುದಿಲ್ಲ, ಅಂತಹ ಒಂದು ಪರಿಸ್ಥಿತಿಯನ್ನು ಇದು ತನಕವೂ ಯಾರೂ ಉಂಟು ಮಾಡಿಲ್ಲ. ಅದಕ್ಕಾಗಿ ಈ ಸೌಲಭ್ಯಗಳ ಬಗ್ಗೆ, ರೈತರ ಏಳಿಗೆಗಾಗಿ ಸರಕಾರದವರು ಕೈಗೊಂಡ ಕೆಲಸ ಕಾರ್ಯಗಳ ಬಗ್ಗೆ ಒಂದು ನಿರ್ದಿಷ್ಟವಾದ ರೀತಿಯಲ್ಲಿ ಪ್ರಚಾರ ಕಾರ್ಯ ನಡೆಯಬೇಕು. ಅದರಿಂದಾಗಿ ರೈತರು ಎಲ್ಲಾ ವಿಷಯಗಳನ್ನು ತಿಳಿಯುವಂತಾಗಬೇಕು. ಮತ್ತು ರೈತರಿಗೆ ಲಾಭವಾಗುವಂತಾಗಬೇಕು. ಆ ರೀತಿಯ ಒಂದು ಸಹಕಾರ ಶಿಕ್ಷಣ ಪ್ರಚಾರವನ್ನು ಮಾಡಬೇಕೆಂದು ಕೇಳಿ ಕೊಳ್ಳುತ್ತಾ ಆ ದಿಸೆಯಲ್ಲಿ ಸೂಕ್ತ ಕಾರ್ಯ ಕ್ರಮವನ್ನು ಹಾಕಿ ಕೊಳ್ಳಬೇಕೆಂದು ನಿವೇದನೆ ಮಾಡಿ ಕೊಳ್ಳುತ್ತೇನೆ. ಈ ಬಗ್ಗೆ ಅನೇಕ ಸಹಕಾರಿ ಯೂನಿಯನ್‌ನವರು ಹೆಚ್ಚಿನ ಮುತುವರ್ಜಿ ವಹಿಸಿ, ಸಹಕಾರ ಶಿಕ್ಷಣದ ಮೂಲಕ ಜನರಿಗೆ ತಿಳಿಸಬೇಕು, ರೈತರು ತಮ್ಮ ಜಪಾಬ್ದಾರಿಗಳನ್ನು, ಅಧಿಕಾರಗಳನ್ನು ತಾವುಗಳೇ ತಿಳಿದುಕೊಳ್ಳುವಂತಾಗಬೇಕು. ಆಗ, ಮಾತ್ರ ಗ್ರಾಹಕರ ಸೇವಾ ಸಂಘಗಳು ಮುಂದೆ ಬರುವುದಕ್ಕೆ ಸಾಧ್ಯ. ಈಗ ಎಷ್ಟೋ ಗ್ರಾಹಕರ ಮಾರ್ಕೆಟಿಂಗ್ ಸೊಸೈಟಿಗಳು ಉದ್ದಾರವಾಗಿವೆ. ಕಾರಣ ಸರ್ಕಾರದವರು ಅವುಗಳಿಗೆ ಅಕ್ಕಿ, ಗೋಧಿ, ಸಕ್ಕರೆ, ಎಲ್ಲಾ ಮಾರುವುದಕ್ಕೆ ಅವಕಾಶ ಕೊಟ್ಟಿದೆ. ಇದರಿಂದ ಅನುಕೂಲವಾಗಿದೆ. ಇವುಗಳ ಜೊತೆಗೆ ಸೀರೆ ಪಂಚೆಗಳನ್ನೂ ಮಾರುತ್ತಿದ್ದಾರೆ. ನಾನು ಹೇಳುವುದು ಏನೆಂದರೆ ಯಾವುದೇ ಖಾಸಗಿ ಜನರಿಗೆ ಇಂಥವನ್ನು ಕೊಡ ಕೂಡದು, ಬದಲಿಗೆ ಸಹಕಾರ ಸಂಘಗಳ ಮೂಲಕ ಮಾತ್ರ ಮಾರುವಂತೆ ವ್ಯವಸ್ಥೆ ಮಾಡಬೇಕು, ಇದರ ಬಗ್ಗೆ ಸರ್ಕಾರ ಕಡ್ಡಾಯವಾಗಿ ನಿರ್ಣಯ ಮಾಡಬೇಕು, ಇದರಿಂದ ಇನ್ನೂ ಎಷ್ಟೋ ಸಹಕಾರ ಸಂಘಗಳ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ. ಇದೊಂದೇ ಅಲ್ಲ, ಪಕ್ಕದ ಮಹಾರಾಷ್ಟ್ರದಲ್ಲಿ ಹತ್ತಿಯನ್ನು ಕೊಳ್ಳುವ ಮುನ್ನೋಪಲಿ ಮಾಡಿದ್ದಾರೆ, ಸರ್ಕಾರದವರೇ ಅದನ್ನು ಕೊಂಡು ರೈತರಿಂದ ಕೇಳುವ ಬೆಲೆ ಕೊಟ್ಟು ರೈತರ ಸ್ಥಿತಿ ಉತ್ತಮ ಪಡಿಸುವ ಯೋಜನೆ ಮಾಡಿದ್ದಾರೆ. ಅದೇ ರೀತಿ ನಮ್ಮ ಸರ್ಕಾರ ಕೂಡ ಕಡ್ಡಾಯವಾಗಿ ಹತ್ತಿಯನ್ನು ಮಾರ್ಕೆಟಿಂಗ್ ಫೆಡರೇಷನ್‌ಗಳ ಸಹಾಯದಿಂದ ಮಾರಿಸುವ ಯೋಜನೆ ಮಾಡಿದರೆ ಒಳ್ಳೆಯದು. ಆ ರೀತಿ ಈ ವರ್ಷ ಸಹಕಾರ ಸಚಿವರು ಹತ್ತಿಯ ಬಗ್ಗೆ ಒಂದು ಮಹತ್ವಪೂರ್ಣವಾದ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ನನ್ನ ಸಲಹೆ.

ಮಾನ್ಯ ಅಧ್ಯಕ್ಷರೇ, ಇನ್ನು ಲೆಕ್ಕ ಪರಿಶೋಧನಾ ಇಲಾಖೆ ಇದು ಸರಿಯಾಗಿ ಕೆಲಸ ಮಾಡುತ್ತಿದೆ, ಆದರೂ ಇನ್ನೂ ಸಾಲದು. ಹೆಚ್ಚು ಆಡಿಟ್ ನಡೆಯಬೇಕು. ರೊಕ್ಕ ಇದ್ದರೆ ಲೆಕ್ಕ, ಲೆಕ್ಕ ಸರಿಯಾಗಿದ್ದರೆ ಹೆಚ್ಚು ರೊಕ್ಕ ಆದ್ದರಿಂದ ಇದನ್ನು ಹೆಚ್ಚು ಚುರುಕು ಮಾಡಬೇಕು. ಹೋದ ವರ್ಷ ನಾನು ಮೈಸೂರಿಗೆ ಹೋದಾಗ ಅಲ್ಲಿ ಒಂದು ಆಡಿಟ್ ರಿಪೋರ್ಟ್ ನೋಡಿದೆ ಆದರಲ್ಲಿ ೩೦ ಪೈಸೆಯನ್ನು ಜಾಸ್ತಿ ಖರ್ಚಾಗಿದೆಯೆಂದೂ ಬರೆದಿದ್ದಾರೆ ಮತ್ತು ಅದನ್ನು ವಸೂಲು ಮಾಡಬೇಕೆಂದು ಬರೆಯಲಾಗಿತ್ತು. ಆವೇಳೆ ಅದಕ್ಕೆ ನೀಡಲಾಗಿದ್ದ ಉತ್ತರವನ್ನೂ ನೋಡಿದೆ, ಏನೆಂದರೆ ೩೦ ಪೈಸೆಯನ್ನು

ಆಡಿಟರ್‌ರವರು ಊಟ ಮಾಡುವಾಗ ಉಪ್ಪು ತಂದಿಟ್ಟು ಕೊಟ್ಟಾಗ ಆದ ಮೆಚ್ಚುವಂತೆ ಈ ತರಹ ಸಣ್ಣ ಸಣ್ಣದನ್ನು ಹಿಡಿದರೆ ಪ್ರಯೋಜನವಿಲ್ಲ. ದೊಡ್ಡ ದೊಡ್ಡದನ್ನು ಹಿಡಿಯಬೇಕು, ಇದು ಇನ್ನೂ ಚುರುಕಾಗಬೇಕು. ವಿಶೇಷವಾಗಿ ತಪ್ಪು ಮಾಡುವವರನ್ನು ಬಲಿಹಾಕಿ ಸಹಕಾರ ಸಂಘಗಳು ಸರಿಯಾಗಿ ನಡೆಯಬೇಕಾದರೆ ಹಸಿರು ಕ್ರಾಂತಿಯಾಗಬೇಕಾದರೆ ದೇಶ ಉನ್ನತ ಮಟ್ಟಕ್ಕೆ ಬರಬೇಕಾದರೆ ಆದು ಸಹಕಾರ ಚಳುವಳಿ ಮೂಲಕ ಮಾತ್ರ ಸಾಧ್ಯ ಆದಕ್ಕಾಗಿ ಆಡಿಟ್ ಡಿಪಾರ್ಟ್‌ಮೆಂಟ್ ಚುರುಕಾಗಿ ಕೆಲಸ ಮಾಡಬೇಕೆಂದು ಮಾನ್ಯ ಸಹಕಾರ ಸಚಿವರನ್ನು ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಗುರುಪಾದಪ್ಪ.—ಸ್ವಾಮಿ ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಗುರುಪಾದಪ್ಪನವರೇ ನೀವು ಕುಳಿತುಕೊಳ್ಳಿ ಈಗ ಸಭೆಯನ್ನು ೧೫ ನಿಮಿಷಗಳವರೆಗೆ ಮುಂದೂಡಲಾಗಿದೆ.

(ಸಭೆಯು ೪–೨೩ ಗಂಟೆಗೆ ಸಮಾವೇಶಗೊಂಡಿತು.)

ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು.

ವಿರೋಧಪಕ್ಷದವರಿಂದ ಧರಣಿ ಸತ್ಯಾಗ್ರಹ

ಅಧ್ಯಕ್ಷರು.—ಮಾನ್ಯ ಗುರುಪಾದಪ್ಪನವರೇ, ಪ್ರಾರಂಭ ಮಾಡಿ.

† ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ತಮ್ಮಲ್ಲಿ ಒಂದು ಅರಿಕೆ ಮಾಡಿಕೊಳ್ಳಲಿಕ್ಕೆ ಇಚ್ಛೆ ಪಡುತ್ತೇನೆ. ಗುರುಪಾದಪ್ಪನವರನ್ನು ಮಾತನಾಡಿ ಎಂದು ಕರೆಯುತ್ತಿದ್ದೀರಿ, ಅವರು ಮಾತನಾಡ ಕೂಡದು ಎಂದು ನಮ್ಮ ಅಭಿಪ್ರಾಯ ಇಲ್ಲ. ಅವರು ಅನೇಕ ವಿಷಯಗಳ ಬಗ್ಗೆ ಮಾತನಾಡಬೇಕು ಎಂದು ನಿಂತಿದ್ದಾರೆ. ತಮಗೆ ಗೊತ್ತಿರುವ ಹಾಗೆ ಪ್ರಸ್ತುತ ಸಮಸ್ಯೆಯ ಬಗ್ಗೆ ಬೆಳಿಗ್ಗೆಯಿಂದ ಪ್ರಯತ್ನ ಮಾಡುತ್ತಿದ್ದೇವೆ, ಇದನ್ನು ತಾವು ಇತ್ಯರ್ಥ ಮಾಡಬೇಕು ಎಂದು ಹೇಳಿ ಈ ಕಡೆಯ ಸದಸ್ಯರು ಮತ್ತು ನಾವು ಬಹಳ ಪ್ರಯತ್ನ ಪಡುತ್ತಿದ್ದೇವೆ. ಮತ್ತೆ ಇದರ ಬಗ್ಗೆ ಅನೇಕ ಚರ್ಚೆ ನಡೆದಿದೆ. ಅನೇಕ ಸೂಚನೆಗಳನ್ನು ಆ ಕಡೆಯವರು ಕೊಟ್ಟಿದ್ದಾರೆ, ವಿರೋಧ ಪಕ್ಷದ ನಾಯಕರು ಕೊಟ್ಟಿದ್ದಾರೆ. ಆದರೆ ಆದು ಇನ್ನೂ ಇತ್ಯರ್ಥವಾಗಿಲ್ಲ. ಇದು ಇತ್ಯರ್ಥ ಆಗುತ್ತದೆ ಎಂದು ಸೂಚನೆಗಳು ನನಗೆ ಕಂಡು ಬರುತ್ತಿವೆ. ಆದು ಆಗುತ್ತದೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಹೀಗಿರಬೇಕಾದರೆ, ಇದು ಇತ್ಯರ್ಥ ಆಗುವುದಕ್ಕೆ ಮೊದಲು ಅವರು ವೆಲ್‌ನಲ್ಲಿ ಕಳಿತಿರುವಾಗ ಅವರು ಮಾತನಾಡಿದರೆ ಬಹಳ ಕಷ್ಟ ವಾಗುತ್ತದೆ. ಡಿಮ್ಯಾಂಡ್ ಮೇಲೆ ಮಾತನಾಡುವಾಗ ಎಲ್ಲರೂ ಮಾತನಾಡುವುದು ಒಳ್ಳೆಯದು. ಕೋ–ಆಪರೇಷನ್ ಬಹಳ ಮಹತ್ವವಾದ ಡಿಮ್ಯಾಂಡ್ ಎಂದು ನನಗನ್ನಿಸುತ್ತದೆ. ಆ ಕಡೆ ಕುಳಿತಿರುವ ತಕ್ಕಂಥವರಿಗೆ ಮಾತನಾಡಬೇಡಿ ಎಂದು ನಾವು ಹೇಳುವುದಕ್ಕಾಗುವುದಿಲ್ಲ, ಅವರಿಗೇನೂ ತೊಂದರೆ ಇಲ್ಲ. ಈ ಕಡೆ ವಿರೋಧಪಕ್ಷಗಳವರು ಯಾರೂ ಮಾತನಾಡದೇ ಬರೀ ಆಳುವ ಪಕ್ಷದವರೇ ಮಾತನಾಡಿ ಕೊಂಡರೆ ಇದರ ಬಗ್ಗೆ ಏನು ಮಹಿಮೆ ಏನು ಮಹತ್ವ ಬರುತ್ತದೆ ಎಂದು ತಾವು ಯೋಚನೆ ಮಾಡ ಬೇಕು. ರೆವಿನ್ಯೂ, ಪ್ಲಾನಿಂಗ್, ಲೇಬರ್ ಬೇಡಿಕೆಗಳ ಮಾತನಾಡುವಾಗಲೇಬರ್ ನನಗೆ ಬಹಳ ಮುಖ್ಯವಾದಂಥ ವಿಷಯ. ರೆವಿನ್ಯೂ ಬಗ್ಗೆ ನನಗೆ ಅಷ್ಟು ಗೊತ್ತಿಲ್ಲದೇ ಇದ್ದರೂ ಬೇರೆಯವರು ಮಾತನಾಡುವುದಕ್ಕೆ ಅವಕಾಶ ಇರಬೇಕು. ವಸ್ತುಸ್ಥಿತಿ ಹೀಗಿರಬೇಕಾದರೆ ಮಾನ್ಯ ಸದಸ್ಯರುಗಳು ಈ ವೆಲ್‌ನಲ್ಲಿ ಕಂಳಿತುಕೊಂಡಿರಬೇಕಾದರೆ ಈ ರೀತಿ ಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಅದನ್ನು ಇತ್ಯರ್ಥ ಮಾಡದೇ ಅವರನ್ನು ಇಲ್ಲಿ ಬಂದು ಕುಳಿತುಕೊಳ್ಳಿ ಎಂದು ಹೇಳುವುದು ಆಗದೇ ಇರುವ ಪರಿಸ್ಥಿತಿ. ಆದುದರಿಂದ ಈ ಪ್ರಶ್ನೆ ಇತ್ಯರ್ಥವಾಗಿಬಿಟ್ಟರೆ ಒಳ್ಳೆಯದು. ಈ ಪ್ರಶ್ನೆಯನ್ನು ಇತ್ಯರ್ಥ ಮಾಡಬಹುದಿತ್ತು. ಆದರೆ ಹಲವಾರು ಕಾರಣಗಳಿಂದ ಇದು ಇತ್ಯರ್ಥವಾಗಲಿಲ್ಲ. ಅವರು ಪ್ರಯತ್ನ ಮಾಡಿದರೂ ಇವರು ಪ್ರಯತ್ನ ಮಾಡಿದರುಸಹ ಇದು ಇತ್ಯರ್ಥವಾಗಲಿಲ್ಲ. ಆದುದರಿಂದ ತಮ್ಮನ್ನು ನಾನುಕೇಳಿಕೊಳ್ಳುವುದೇನೆಂದರೆ ದಯವಿಟ್ಟು ಈ ದಿನದ

ಡಿಮ್ಯಾಂಡ್ ಮೇಲೆ ಮಾಡುವ ಭಾಷಣವನ್ನು ಮುಂದಿಂದುವರಿಸಬೇಡಿ, ದಯವಿಟ್ಟು ಸಭೆಯನ್ನು ಅಡ್ಜರ್ನ್ ಮಾಡಿ. ಆಮೇಲೆ ಪುನಃ ಇದನ್ನು ತೆಗೆದುಕೊಳ್ಳೋಣ. ಇದರ ಬಗ್ಗೆ ಒಂದು ತೀರ್ಮಾನ ಮಾಡದೆ ಮುಂದುವರಿಸಿದರೆ ಒಂದು ತರಹ ತಪ್ಪು ಕಲ್ಪನೆಯಾದಂತಾಗುತ್ತದೆ. ಸಭೆಯಲ್ಲಿ ಸರಿಯಾದ ಒಂದು ವಾತಾವರಣ ಬಂದಮೇಲೆ ಇದನ್ನು ಮುಂದುವರಿಸಿದರೆ ಒಳ್ಳೆಯದು. ಅದು ಬಿಟ್ಟು ಹೀಗೆಯೇ ಮುಂದುವರಿಸಿದರೆ ಅದು ಸತ್‌ಸಂಪ್ರದಾಯವಾಗುವುದಿಲ್ಲ. ಒಳ್ಳೆಯ ಪರಂಪರೆಯಾಗುವುದಿಲ್ಲ. ಆದುದರಿಂದ ಇಲ್ಲಿ ಒಳಗೆ ಕುಳಿತಿರುವವರನ್ನು ಕರೆಯಿಸಿಕೊಂಡು ಒಂದು ತೀರ್ಮಾನಕ್ಕೆ ಬಂದರೆ ಒಳ್ಳೆಯದು. ನಿಮಗೆ ಹೇಗಾದರೂ ಅಧಿಕಾರ ಇದೆ. ಹೀಗೆ ಇದ್ದರೂ, ಯಾರೂ ಇಲ್ಲದೇ ಹೋದರೂ ಈ ದಿನದ ಕಾರ್ಯಕಲಾಪಗಳನ್ನು ಪಾಸ್ ಮಾಡಿಕೊಂಡು ಹೋಗ ಬಹುದು. ಆದರೆ ಅದು ಒಳ್ಳೆಯ ಸಂಪ್ರಾದಾಯವಲ್ಲ ಅಲ್ಲದೆ ಇದರ ಬಗ್ಗೆ ಪ್ರಜಾಪ್ರಭುತ್ವದ ತತ್ವಕ್ಕೆ ವಿರುದ್ಧವಾಗಿರುತ್ತದೆ ಎನ್ನುವ ಪ್ರಶ್ನೆ ಬರುತ್ತದೆ. ಹಿಂದೆ ಇದೇ ಮನೆಯಲ್ಲಿ ೪೦ ಜನ ಕುಳಿತಿದ್ದಾಗ ಈ ತರಹ ಪಾಸ್ ಮಾಡಿಕೊಂಡು ಹೋಗಿದ್ದಿಲ್ಲ, ಏನೋ ಈ ಮನೆಯಲ್ಲಿ ಒಬ್ಬಿಬ್ಬರು ಕುಳಿತುಕೊಂಡು ಆ ತರಹ ನಡೆದುಕೊಂಡು ಹೋಗಿರಬಹುದು. ಇದು ಟೆಕ್ನಿಕಲ್ ರೀಸನ್ಸ್ ಮೇಲೆ ಒಬ್ಬಿಬ್ಬರು ಕುಳಿತುಕೊಂಡಾಗ ಪಾಸ್ ಮಾಡಿಕೊಂಡುಹೋಗಿದ್ದಾರೆ ಎನ್ನುವ ದೃಷ್ಟಿಯನ್ನಿಟ್ಟುಕೊಂಡು ಅದೇರೀತಿಯಾಗಿ ಈಪೊತ್ತಿನ ಡಿಮ್ಯಾಂಡ್‌ನ್ನೂ ಕೂಡ ಪಾಸ್ ಮಾಡಿಕೊಂಡು ಹೋದರೆ ಅದು ಸಮಂಜಸವಾಗಿರುವುದಿಲ್ಲ, ಪ್ರಜಾಪ್ರಭುತ್ವದ ತತ್ವಕ್ಕೆ ವಿರುದ್ಧವಾಗಿರುತ್ತದೆ. ಆದುದರಿಂದ ನಾನು ತಮ್ಮಲ್ಲಿ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ ಈ ಪ್ರಶ್ನೆ ಇತ್ಯರ್ಥವಾಗುವವರೆಗೆ ಆ ಕಡೆಯವರನ್ನೂ ಈ ಕಡೆಯವರನ್ನೂ ದಯವಿಟ್ಟು ಕರೆಯಿಸಿ ಮಾತನಾಡಿ. ಹೀಗೆಂದ ಮಾತ್ರಕ್ಕೆ ನಾನು ಈಗ ತಾವು ಆ ಕಡೆಯವರನ್ನು ಮಾತನಾಡಂವುದಕ್ಕೆ ಏನು ಕರೆದಿದ್ದೀರೋ ಅವರ ಬಾಯಿಕಟ್ಟಬೇಕೆನ್ನುವ ದೃಷ್ಟಿಯನ್ನಿಟ್ಟುಕೊಂಡು ಹೇಳುತ್ತಾ ಇಲ್ಲ. ಈ ಸಮಸ್ಯೆ ಇತ್ಯರ್ಥವಾದರೆ ಒಂದು ತಿಳಿ ವಾತಾವರಣ ಬರುತ್ತದೆ. ಆಗ ನಮಗೂ ನಿಮಗೂ ಸಂತೋಷವಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗರಪಳ್ಳಿ.—ಮಾನ್ಯ ಸದಸ್ಯರು ಮಾತನಾಡುವಾಗ ಬಾಯಿಕಟ್ಟಬೇಕು ಎನ್ನುವುದನ್ನು ಹೇಳಿದರು, ಅದೇನು ಎನ್ನುವುದು ನನಗೆ ಅರ್ಥವಾಗಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳಿದ್ದುದು ಏನೆಂದರೆ ಈಗ ತಾವು ಕೋ ಆಪರೇಷನ್ ಡಿಮ್ಯಾಂಡ್ ಮೇಲೆ ಮಾತನಾಡುತ್ತಿದ್ದೀರಿ. ಈಗ ಇಲ್ಲಿಯ ವಾತಾವರಣ ನೋಡಿದರೆ ವೆಲ್‌ನಲ್ಲಿ ಇರತಕ್ಕಂಥ ಮಾನ್ಯ ಸದಸ್ಯರುಗಳನ್ನು ಹಾಗೆಯೇ ಇಟ್ಟುಕೊಂಡು, ಮಾತನಾಡುವುದಾದರೆ ಅದು ಒಳ್ಳೆಯ ಸಂಪ್ರದಾಯವಲ್ಲ, ಆದುದರಿಂದ ತಾವು ಇದರ ಬಗ್ಗೆ ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡಿ. ಇಪೊತ್ತು ಇದು ಇತ್ಯರ್ಥವಾಗುವುದಿಲ್ಲ ಎಂದರೆ, ಈ ಸಮಸ್ಯೆ ಇತ್ಯರ್ಥವಾಗದೇ ಇರತಕ್ಕಂಥ ದ್ದೇನೂ ಅಲ್ಲ, ಇದು ಇತ್ಯರ್ಥವಾಗುವುದೇ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಈ ಸಮಸ್ಯೆ ನಾಳೆ ಇತ್ಯರ್ಥವಾಗಬಹುದು ಇಲ್ಲವೇ ನಾಡಿದ್ದು ಇತ್ಯರ್ಥವಾಗಬಹುದು. ನಾನು ಹೇಳಿದ ಮಾತನ್ನು ತಾವು ಒಪ್ಪಬಹುದು ಅಥವಾ ಒಪ್ಪಿಕೊಳ್ಳದೇ ಇರಬಹುದು. ಒಂದೊಂದು ಸಂದರ್ಭದಲ್ಲಿ ಕದನವಿರಾಮ ಆಗಬಹುದು, ಆದರೆ ಅದಕ್ಕೆ ನಾವು ವಿರಾಮ ಕೊಡಬೇಕಾಗುತ್ತದೆ. ಈ ಕದನವಿರಾಮ ನಿಲ್ಲುವ ಹಾಗೆ ಒಂದು ವಾತಾವರಣವನ್ನು ಕಲ್ಪನೆ ಮಾಡಿದರೆ ಒಳ್ಳೆಯದು. ಈ ದೃಷ್ಟಿಯಿಂದ ನಾನು ಹೇಳಿದ್ದೇ ವಿನಾ ತಮ್ಮ ಬಾಯನ್ನು ಕಟ್ಟಬೇಕು ಎಂದು ಹೇಳಲಿಲ್ಲ. ಒಂದು ಒಳ್ಳೆಯ ಸಂಪ್ರದಾಯ, ಒಳ್ಳೆಯ ಪರಂಪರೆ ಬರಬೇಕು ಎನ್ನುವ ದೃಷ್ಟಿಯಿಂದ ಹೇಳಿದೆ. ಮತ್ತು ತಾವು ಇವರನ್ನೂ ಸೇಫ್ ಗಾರ್ಡ್ ಮಾಡಬೇಕು, ಅವರನ್ನೂ ಸೇಫ್ ಗಾರ್ಡ್ ಮಾಡಬೇಕು. ಆದು ಹಾಗೆಯೇ ಬೇಡಿಕೆಗಳನ್ನು ಪಾಸು ಮಾಡಿಕೊಂಡಿಕೊಂಡರೆ ಅಪೋಸಿಷನ್ ಇರಲಿಲ್ಲವೇನೋ ಎನ್ನುವ ಭಾವನೆ ಜನರಿಗೆ ಬರುತ್ತದೆ. ಇದು ಪ್ರಜಾಪ್ರಭುತ್ವ ತತ್ವಕ್ಕೆ ಒಳ್ಳೆಯ ಸಂಪ್ರದಾಯವಲ್ಲ. ನಮ್ಮ ಕರ್ನಾಟಕ ರಾಜ್ಯದ ವಿಧಾನಸಭೆ ಪ್ರಪಂಚಕ್ಕೇ ಹೆಸರುವಾಸಿಯಾದಂಥ ವಿಧಾನಸಭೆ ಇದರ ಹೆಸರನ್ನು ಹಾಳು ಮಾಡಬೇಡಿ. ನೀವು ಅವರನ್ನು ವಿಶ್ವಾಸಕ್ಕೆ ಕರೆದುಕೊಳ್ಳಬೇಕು. ಈ ತರಹ ಕೆಟ್ಟ ಸಂಪ್ರದಾಯ ಆಗಬಾರದು. ತಮಗೆ ಗೊತ್ತಿದೆ, ಮಾನ್ಯ ಪಟೇಲ್‌ರವರು, ಮಾನ್ಯ ಎಸ್. ಆರ್. ಬೊಮ್ಮಾಯಿ ಅವರು, ಮಾನ್ಯ ಹೆಚ್. ಡಿ. ದೇವೇಗೌಡರು ಇವರೆಲ್ಲಾ ಒಳ್ಳೆಯ ಪಾರ್ಲಿಮೆಂಟೇರಿಯನ್ಸ್. ಇವರಿಗೆ ಇದರ ಅನುಭವ ಚೆನ್ನಾಗಿ ಗೊತ್ತಿದೆ. ಆದುದರಿಂದ ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇವೊತ್ತು ಈ ಚರ್ಚೆಯನ್ನು ಮುಂದುವರೆಸಬೇಡಿ, ಈ ಸದನವನ್ನು ಈಗ ಅಡ್ಜರ್ನ್ ಮಾಡಿ ನಾಳೆ ಮುಂದುವರೆಸೋಣ ನಾಳೆ

ಇದರ ಬಗ್ಗೆ ಪುನಃ ಚರ್ಚೆ ಮಾಡೋಣ. ನಾಳೆಯವರೆಗೆ ಇದನ್ನು ಮುಂದುವರೆಸಿದರೆ ಆಂಥಾದ್ದೇನೂ ಆಗುವುದಿಲ್ಲ. ಆದರೆ ಇದು ತಾವು ಇತ್ಯರ್ಥವಾಗುವುದಿಲ್ಲ ಎನ್ನುವ ಭಾವನೆಗೆ ಬರಬಾರದು. ಇದರಲ್ಲಿ ಏನು ಬೇಕಾದರೂ ಸಂಶಯ ಬರಬಹುದು. ಈಗ ನಮಗೆ ಇದರ ಬಗ್ಗೆ ಒಳ್ಳೆಯ ಚಿಹ್ನೆ ಬರಬಹುದು ಎಂದು ಅಂದುಕೊಂಡಿದ್ದೇನೆ. ಇದರ ಬಗ್ಗೆ ಶ್ರೀ ಬಿ. ಎಸ್. ಯಡಿಯೂರಪ್ಪನವರು, ಶ್ರೀ ವೆಂಕಟರಾಮಯ್ಯನವರು ಮತ್ತು ನಾವುಗಳು ಎಲ್ಲರೂ ಸೇರಿ ಚರ್ಚೆ ಮಾಡಿದರೆ ಏನಾದರೂ ಒಂದು ತೀರ್ಮಾನಕ್ಕೆ ಬರಬಹುದು ಎನ್ನುವ ಚಿಹ್ನೆ ಬರುತ್ತದೆ. ಆಮೇಲೆ ತಾವು ಸರಿಯಾದ ತೀರ್ಮಾನಕ್ಕೆ ಬರಬಹುದು ಎನ್ನುವ ಚಿಹ್ನೆ ಬರುತ್ತದೆ. ಆಮೇಲೆ ತಾವು ಸರಿಯಾದ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮಳವಳ್ಳಿ).—ಮಾನ್ಯ ಅಧ್ಯಕ್ಷರೆ, ಸತತವಾಗಿ ನಾಲ್ಕು ದಿವಸಗಳಿಂದಲೂ ಇದರ ಬಗ್ಗೆ ಪ್ರಯತ್ನಗಳು ನಡೆಯುತ್ತಿದ್ದರೂ ಕೂಡ ಯಾರಾದರೂ ಸಹ ಇದರ ಬಗ್ಗೆ ರೆಸಲ್ಯೂಷನ್ ಅನ್ನು ಕಂಡುಹಿಡಿಯುವುದಕ್ಕಾಗಲಿಲ್ಲ. ಹೀಗೇಯೇ ಮುಂದುವರೆಯುತ್ತಾ ಇದೆ. ಇದನ್ನು ಬೇಗನೆ ಬಗೆಹರಿಸಿದರೆ ಒಳ್ಳೆಯದು. ಏತಕ್ಕೆಂದರೆ ಇದರಲ್ಲಿ ಬಹಳ ಮುಖ್ಯವಾದ ವಿಚಾರ ಎಂದರೆ ಕರ್ನಾಟಕ ವಿಧಾನಸಭೆಯಲ್ಲಿ 225 ಜನ ಸದಸ್ಯರು ಏನು ಇದ್ದಾರೆ ಇವರ ಬಗ್ಗೆ ಕರ್ನಾಟಕದ ಜನತೆ ಏನು ತಿಳಿದುಕೊಳ್ಳುತ್ತಾರೆಂದರೆ ಇವರು ವಿಧಾನಸಭೆಯಲ್ಲಿ ಹೇಗೆ ನಡೆದುಕೊಳ್ಳುತ್ತಾರೆ ಎನ್ನುವುದನ್ನು ತಿಳಿದುಕೊಳ್ಳುವುದಲ್ಲದೆ ಇವರು ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಅದರ ಬಗ್ಗೆ ಒಂದು ತಪ್ಪು ಕಲ್ಪನೆ ಉಂಟಾಗಿ ಇವರು ಕರ್ನಾಟಕ ರಾಜ್ಯದ ರಾಜ್ಯಭಾರವನ್ನು ಯಾವರೀತಿ ಮಾಡುತ್ತಿದ್ದಾರೆ ಎನ್ನುವುದನ್ನು ಅವರು ಎಲ್ಲರ ಮುಂದೆ ವ್ಯಕ್ತಪಡಿಸುವುದರಿಂದ ನಮಗೆ ಅವಮಾನವಾಗುತ್ತದೆ. ಅಧಿಕಾರದಲ್ಲಿರುವವರು ನಡೆಯತಕ್ಕಂಥ ರೀತಿನೀತಿಗಳನ್ನು ನಾವು ಕೇಳಿಕೊಂಡಿರತಕ್ಕಂಥದ್ದು ನಮ್ಮ ದುರಾದೃಷ್ಟ ಅಲ್ಲದೆ ಈ ಅಪೋಸಿಷನ್‌ನವರಾಗಲಿ ಅಥವಾ ಆಡಳಿತ ಪಕ್ಷದಲ್ಲಿರುವವರಾಗಲಿ ಇದರ ಬಗ್ಗೆ ಇದುವರೆಗೂ ಒಂದು ಸೆಲ್ಯೂಷನ್ ಕಂಡುಹಿಡಿಯದೇ ಇರುವುದು ದುರಾದೃಷ್ಟವೇ ಆಗಲಿ ಅಪೋಸಿಷನ್‌ನವರನ್ನು ಬಿಟ್ಟು ಸದನವನ್ನು ಮುಂದುವರೆಸುವುದು ಡಿಮ್ಯಾಂಡ್ ಬಗ್ಗೆ ಚರ್ಚಿಸುವುದು ಅಷ್ಟು ಸೂಕ್ತವಾದುದಲ್ಲ. ಅದಕ್ಕಾಗಿ ನಾನು ಹೇಳುತ್ತೇನೆ, ಈ ಸದನವನ್ನು ಸೋಮವಾರದವರೆಗೆ ಅಡ್ಜರ್ನ್ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ಇಲ್ಲ, ಅವರು ಸೋಮವಾರ ಬರುತ್ತಾರೆ, ಅವರು ಹರಿದ್ವಾರಕ್ಕೆ ಹೋಗಿದ್ದಾರೆ. ಅದುವರೆಗೆ ಈ ಸದನದ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇಲ್ಲದೇ ಹೋದರೆ ಇದು ಒಳ್ಳೆಯ ಸಂಪ್ರದಾಯವಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ,

4-30 ಪಿ. ಎಂ.

† ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಕಳೆದ ಮೂರು ದಿವಸಗಳಿಂದ ನಾವು ಮೂರು ಜನರು ಇಲ್ಲಿ ಒಂದೇ ವಿಚಾರವನ್ನು ತಮ್ಮಗಮನಕ್ಕೆ ತರುತ್ತಿದ್ದೇವೆ.ಒಂದು ಕಡೆ ಈ ರಾಜ್ಯದ ರೈತರು ತಮ್ಮ ನ್ಯಾಯವಾದ ಬೇಡಿಕೆಗಳು ಈಡೇರಲಿಲ್ಲವೆಂದು ಚಳುವಳಿ ಮಾಡಿ ಜೈಲ್‌ಗೆ ಹೋಗುತ್ತಿದ್ದಾರೆ, ಆದರೆ ಮತ್ತೊಂದು ಕಡೆ ಇಲ್ಲಿ ಇಂತಹ ಒಂದು ಸಮಸ್ಯೆ ಉಂಟಾಗಿದೆ. ನಾವು ಈ ಸಹಕಾರಿ ಇಲಾಖೆಯ ಮೇಲಿನ ಬೇಡಿಕೆಗಳ ಮೇಲೆ ಚರ್ಚೆ ಮಾಡಿ ರೈತರ ಸಮಸ್ಯೆಗಳನ್ನು ಬಗೆಹರಿಸಬಹುದಾಗಿತ್ತು. ಆದರೆ ಈಗ ಇಲ್ಲಿ ಪ್ರಮುಖವಾದಂಥ ವಿರೋಧಪಕ್ಷದ ಸದಸ್ಯರು ಧರಣಿ ನಡೆಸುತ್ತಿರುವಾಗ ಆಡಳಿತ ಪಕ್ಷದವರು ಸದನದ ಕಾರ್ಯಕಲಾಪಗಳನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಾದ ಕ್ರಮವಲ್ಲ. ಈ ಒಂದು ಅಹಿತಕರವಾದಂಥ ಘಟನೆ ಕಳೆದ ಮೂರು ದಿವಸಗಳಿಂದ ಮುಂದುವರಿದುಕೊಂಡು ಬಂದಿದೆ. ಇದನ್ನು ಎಲ್ಲರೂ ಕುಳಿತು ಚರ್ಚೆ ಮಾಡಿ ಬಗೆಹರಿಸಬೇಕೆಂದು ನಾವು ಮೂರು ಜನರು ತಮ್ಮಲ್ಲಿ ಅನೇಕ ಸಲ ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಇಲ್ಲಿನ ಈ ಸಮಸ್ಯೆ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಯನ್ನು ಹೊರಗಡೆಯ ಜನರು ನೋಡುವುದಿಲ್ಲ. ಆದರೆ ಇಡೀ ರಾಜ್ಯದ ಜನರು ಇಂತಹ ಒಂದು ಸಮಸ್ಯೆಯನ್ನು ಕಳೆದ ಮೂರು ದಿವಸಗಳಿಂದ ಬಗೆಹರಿಸದಿದ್ದವರು ಇನ್ನು ರಾಜ್ಯದ ಸಮಸ್ಯೆಯನ್ನು ಇವರು ಬಗೆಹರಿಸಬಲ್ಲರೇ ಎಂದು ಮಾತನಾಡಿಕೊಳ್ಳುತ್ತಾರೆ ಮತ್ತು ನಮ್ಮನ್ನು ಹಗುರವಾಗಿ ಕಾಣಬಹುದು. ಈ ಒಂದು ಘಟನೆ ನಡೆದಂಥ ಸಮಯದಲ್ಲಿ ಮುಖ್ಯಮಂತ್ರಿಗಳು ಇರಲಿಲ್ಲ. ಅವರು ಬಂದಮೇಲೆ ಇದನ್ನು ಬಗೆಹರಿಸುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಅವರು ಇಂದು ಚುನಾವಣೆ ಸಂದರ್ಭದಲ್ಲಿ ಬೇರೆ ರಾಜ್ಯಕ್ಕೆ ಹೊರಟಿದ್ದಾರೆಂದು ನಾನು ಕೇಳಿದ್ದೇನೆ. ಈ ವಿಷಯ ಕೇಳಿ ನನ್ನ ಮನಸ್ಸಿಗೆ ತುಂಬಾ ನೋವಾಗಿದೆ. ಈ ಘಟನೆಯ ಬಗ್ಗೆ ಅವರಿಗೇನಾದರೂ ಕಳಕಳಿ ಇದ್ದಿದ್ದರೆ, ಅವರು ಇಲ್ಲಿಯೇ ಇದ್ದು ಈ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು. ಇಲ್ಲಿನ ಕಾರ್ಯಕಲಾಪಗಳು ಇನ್ನೂ ಮುಂದೆ ಸುಲಲಿತವಾಗಿ ನಡೆಯುತ್ತವೆ. ಎಂಬುದನ್ನು ಖಾತ್ರಿ ಮಾಡಿಕೊಂಡು ಅವರು ಬೇರೆ ರಾಜ್ಯಕ್ಕೆ ಹೋಗಬಹುದಾಗಿತ್ತು. ಆದರೆ ಅವರು ಸಮಸ್ಯೆಯನ್ನು ಬಗೆಹರಿಸದೆ ಹಾಗೆಯೇ ಹೊರಟುಹೋಗಿದ್ದಾರೆ. ಈಗಲೂ ಸಹ ನಾನು ತಮ್ಮಲ್ಲಿ ಹಾಗೂ ಆಡಳಿತಪಕ್ಷದವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಒಂದು ಅಹಿತಕರವಾದಂಥ ಘಟನೆಯ ಬಗ್ಗೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯುವುದು ಒಳ್ಳೆಯದು. ನಾವು ಸಹ ಇದರ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದೇವೆ. ಈ ಹಿಂದೆ ಸಹ ವಿರೋಧಪಕ್ಷದವರು ವೆಲ್‌ನಲ್ಲಿ ಧರಣಿ ಕುಳಿತುಕೊಂಡ ಸಂದರ್ಭದಲ್ಲಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಲಾಗಿದೆ ಎಂದು ಕೆಲವರು ಹೇಳಿದರು. ಆದರೆ ಇದು ಸರಿಯಾದ ಕ್ರಮವಾಗುವುದಿಲ್ಲ. ಆಡಳಿತ ಪಕ್ಷದವರು ಇಲಾಖಾ ಬೇಡಿಕೆಗಳ ಮೇಲೆ ಮಾತನಾಡಬಹುದು. ಇಂತಹ ಸಂದರ್ಭದಲ್ಲಿ ಮಾತನಾಡಲು ಹೆಚ್ಚಿನ ಸಮಯ ಸಹ ಸಿಗುತ್ತದೆ. ಆದರೆ ಆಡಳಿತದಲ್ಲಿರುವಂತಹ ಹುಳುಕನ್ನೆಲ್ಲಾ ವಿರೋಧಪಕ್ಷದವರು ಹೇಳುವ ರೀತಿಯಲ್ಲಿ ಹೇಳುವುದಕ್ಕಾಗುವುದಿಲ್ಲ. ಏನಿದ್ದರೂ ತಮ್ಮ ಪಕ್ಷದ ಸಭೆಯಲ್ಲಿ ಬೇಕಾದರೆ ಹೇಳಬಹುದು. ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಇಂತಹ ಘಟನೆಗಳು ಬೇರೆ ವಿಧಾನಸಭೆಗಳಲ್ಲಿಯೂ ಸಹ ಜರುಗಿದೆ ಎಂಬ ಕಾರಣ ಕೊಟ್ಟು ನೀವು ಸಭೆ ನಡೆಸುವುದು ಸರಿಯಲ್ಲ. ಕಾನೂನಿನಲ್ಲಿ ಇದಕ್ಕೆ ಅವಕಾಶ ಇರಬಹುದು, ಆದರೆ ಪುಭಲವಾದಂಥ ವಿರೋಧಪಕ್ಷ ವೆಲ್‌ನಲ್ಲಿ ಕುಳಿತಿರುವಾಗ ನೀವು ಸಭೆ ನಡೆಸಿದರೆ ಅದನ್ನು ರಾಜ್ಯದ ಜನತೆ ಕ್ಷಮಿಸುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರು ಇದಕ್ಕೆ ಖಂಡಿತ ಅವಕಾಶ ಮಾಡಿಕೊಡಬಾರದೆಂದು ಹೇಳುತ್ತೇನೆ.

(ಗೊಂದಲ)

ನಾನು ಹೆಚ್ಚು ಮಾತನಾಡಿ ತಮ್ಮ ಮನಸ್ಸಿಗೆ ನೋವನ್ನುಂಟು ಮಾಡುವುದಿಲ್ಲ. ಆದರೆ 50-60 ಜನ ಸದಸ್ಯರು ಇಲ್ಲಿ ಧರಣಿ ಕುಳಿತಿರುವಾಗ ನೀವು ಸಭೆ ನಡೆಸಿದರೆ, ಅದು ಚೆನ್ನಾಗಿ ಕಾಣುವುದಿಲ್ಲ. ಕಾರ್ಯಕಲಾಪಗಳು ಸಹ ಸರಿಯಾಗಿ ನಡೆಯುವುದಿಲ್ಲ, ಇಲ್ಲಿ ಮಾನ್ಯ ಕೃಷ್ಣನ್ ಅವರು, ಮಾನ್ಯ ವೆಂಕಟರಾಮಯ್ಯನವರು ಮತ್ತು ನಾನು ಕೆಲವು ಸಲಹೆಗಳನ್ನು ಕೊಟ್ಟರೆ ಅದನ್ನು ಸ್ವೀಕಾರ ಮಾಡುತ್ತೀರೆಂದು ನಾವು ಹೇಳುತ್ತಿದ್ದೇವೆ. ಆದರೂ ಆಡಳಿತಪಕ್ಷದವರು ಕೇಳದ್ದಿದ್ದರೆ ಏನು ಮಾಡುವುದಕ್ಕಾಗುತ್ತದೆ ? ಕೆಲವು ಸಲ ಅಧಿಕಾರದ ಪಿತ್ತ ನೆತ್ತಿಗೇರಿದಾಗ ಇಂತಹ ಘಟನೆಗಳು ನಡೆಯುವುದುಂಟು ಈ ಹಿಂದೆ ಸಹ ಕೆಲವರು ತಮ್ಮ ತಪ್ಪನ್ನು ತಿದ್ದಿಕೊಳ್ಳದೆ ಅಧಿಕಾರವನ್ನು ಸಹ ಕಳೆದುಕೊಂಡಿದ್ದಾರೆ. ಈಗ ನೀವೂ ಸಹ ಈ ಹಿಂದಿನವರು ಮಾಡಿದಂತೆ ಮಾಡುವುದಾದರೆ ಮತ್ತು ಪ್ರಮುಖ ವಿರೋಧ ಪಕ್ಷದವರು ವೆಲ್‌ನಲ್ಲಿರುವಾಗಲೇ ಸಭೆ ನಡೆಸುವುದಾದರೆ ನಾವು ಸಭೆಯಲ್ಲಿರುವುದಿಲ್ಲ. ಬಿ.ಜೆ.ಪಿ.ಪರವಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಸಭೆಯನ್ನು ಮುಂದುವರಿಸಿದರೆ ನಾವು ಪ್ರತಿಭಟನೆ ಮಾಡಿ ಹೊರಹೋಗಬೇಕಾಗಿ ಬರುತ್ತದೆ. ಆದ್ದರಿಂದ ತಮ್ಮ ತೀರ್ಮಾನವನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈಗ ಬಂದಿರುವ ಬಿಕ್ಕಟ್ಟನ್ನು ಬಿಡಿಸಲಿಕ್ಕೆ ವಿರೋಧ ಪಕ್ಷದ ಸದಸ್ಯರಾದಂಥ ಶ್ರೀ ಎಂ.ಎಸ್. ಕೃಷ್ಣನ್ ಅವರು ಶ್ರೀ ಆರ್. ವೆಂಕಟರಾಮಯ್ಯನವರು ಮತ್ತು ಶ್ರೀ ಬಿ.ಎಸ್. ಯಡಿಯೂರಪ್ಪನವರು ಕಳೆದ ನಾಲ್ಕು ದಿವಸಗಳಿಂದ ಪ್ರಯತ್ನ ಮಾಡಿದ್ದಾರೆ. ಆದರೆ ದುರ್ದೈವದಿಂದ ಈ ಬಿಕ್ಕಟ್ಟು ಇನ್ನೂ ಪರಿಹಾರವಾಗಿಲ್ಲ. ನಾವೂ ಕೂಡ ಈ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದೇವೆ. ಆದರೆ ಪರಿಹಾರ ಸಿಕ್ಕಿಲ್ಲ, ಇಂದು ಪುನಃ ಸಭೆಯನ್ನು ಮುಂದಕ್ಕೆ ಹಾಕುವುದರ ಬಗ್ಗೆ ನಾನು ಸರ್ಕಾರದ ಪರವಾಗಿ ಸ್ಪಷ್ಟೀಕರಣ ನೀಡುವುದಕ್ಕೆ ಬಯಸುತ್ತೇನೆ, ಏನೆಂದರೆ, ಜನತೆ ನಮಗೆ ಅಧಿಕಾರ ನಡೆಸಲು ಅನುಮತಿ ನೀಡಿದ್ದಾರೆ. ಆದ್ದರಿಂದ

ನಾವು ಸಭೆ ನಡೆಸದೆ ಪ್ರತಿ ದಿನವೂ ಸಭೆಯನ್ನು ಮುಂದಕ್ಕೆ ಹಾಕುತ್ತಾ ಹೋದರೆ, ಜನತೆ ನಮಗೆ ಕೊಟ್ಟಂಥ ಅಣತಿ ಏನಿದೆ ಅದನ್ನು ಜಾರಿಗೆ ತರದೆ ಕರ್ತವ್ಯಲೋಪ ಮಾಡಿದಂತೆ ಆಗುತ್ತದೆ. ನಮ್ಮ ಮನಸ್ಸಿನಲ್ಲಿಯೂ ಸಹ ವೇದನೆ ಇದೆ. ಆದರೂ ಸಹ ನಮ್ಮ ಕರ್ತವ್ಯವನ್ನು ನಾವು ಪಾಲನೆ ಮಾಡಬೇಕಾಗಿದೆ. ಆದ್ದರಿಂದ ನೀವು ದಯವಮಾಡಿ ನಮ್ಮ ಜೊತೆ ಚರ್ಚೆಯಲ್ಲಿ ಭಾಗವಹಿಸಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಅವರು ಧರಣಿ ಕುಳಿತಿದ್ದರೂ ಸಹ ನಾವು ನಿಮಗೆ ಸಹಕಾರ ನೀಡಬೇಕೆಂದು ಕೇಳುತ್ತಿದ್ದೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇದು ಅಂತಹ ಪರಿಸ್ಥಿತಿ ಬಂದಿದೆ. ನಾನು ಪುನಃ ಅವರಲ್ಲಿ ಮನವಿ ಮಾಡಿಕೊಳ್ಳುತ್ತಾ ಇದ್ದೇನೆ. ಅವರು ತಮ್ಮ ಸ್ಥಾನಕ್ಕೆ ಹೋಗಿ ಚರ್ಚೆಯಲ್ಲಿ ಭಾಗವಹಿಸಿ ಪಾಲ್ಗೊಂಡರೆ ಮಾತ್ರ ಸರ್ಕಾರದ ಪರವಾಗಿ ಉತ್ತರ ಕೊಡಲಿಕ್ಕೆ ಒಂದು ರೀತಿಯಿಂದ ಮನಸ್ಸೂ ಒಪ್ಪುತ್ತದೆ, ಒಂದು ರೀತಿಯಿಂದ ಕರ್ತವ್ಯ ಪಾಲನೆ ಸರಿಯಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ —ವಿರೋಧ ಪಕ್ಷದವರನ್ನು ವೆಲ್‌ನಲ್ಲಿ ಕುರಿಸಿಕೊಂಡು ಕಲಾಪ ಮಾಡಿದರಂ ಎಂದು ಆರೋಪ ಬರುವುದಿಲ್ಲ ವೇ?

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಯಡಿಯೂರಪ್ಪನವರು ಅವರಪ್ಪಕ್ಕೆ ಅವರೇ ಮಾತನಾಡಿಕೊಳ್ಳುತ್ತಾ ಇದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಳೆ ದಿವಸಗಳಿಂದ ಈ ಸಭೆಯಲ್ಲಿ ಏನೂ ಕಾರ್ಯಕಲಾಪಗಳನ್ನು ಮಾಡದೆ ಮುಂದುವರಿಸಿಕೊಂಡು ಬರಲಾಗಿದೆ. ಇನ್ನೂ ಮುಂದುವರಿಸಿದರೆ ನಾವು ಕರ್ತವ್ಯಚ್ಯುತಿ ಮಾಡಿದಹಾಗೆ ಆಗುತ್ತದೆ. ಜನತೆ ನಮ್ಮನ್ನು ಇಲ್ಲಿ ಕಳಿಸಿಕೊಟ್ಟಿರುವುದು ನಮ್ಮ ಕರ್ತವ್ಯವನ್ನು ಸರಿಯಾಗಿ ಪಾಲನೆ ಮಾಡುವುದಕ್ಕಾಗಿ, ದಯವಿಟ್ಟು ತಮ್ಮ ಸಹಕಾರ ಕೇಳುತ್ತಾ ಇದ್ದೇನೆ. ತಾವು ಈ ಚರ್ಚೆಯಲ್ಲಿ ಪಾಲ್ಗೊಳ್ಳಿ, ತಮ್ಮ ಮಾತುಗಳನ್ನು ಕೇಳುತ್ತೇವೆ, ಮತ್ತೆ ಉತ್ತರ ಕೊಡಲಿಕ್ಕೆ ಸಿದ್ಧರಿದ್ದೇವೆ. ದಯವಿಟ್ಟು ನೀವು ಈ ಚರ್ಚೆಯಲ್ಲಿ ಭಾಗವಹಿಸಬೇಕೆಂ ಎಂದು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಕರ್ತವ್ಯ ಪಾಲನೆ ಮಾಡಬೇಕಾಗಿದೆ ಎಂದು ಮಾನ್ಯ ಮಂತ್ರಿಗಳೇ ಹೇಳಿದರು. ಕರ್ತವ್ಯ ಪಾಲನೆ ಮಾಡಬೇಕು ಎನ್ನುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಸರ್ಕಾರ ನಿಮಗೆ ಅಧಿಕಾರ ಕೊಟ್ಟಮೇಲೆ ಕರ್ತವ್ಯ ಪಾಲನೆ ಮಾಡಲೇಬೇಕು. ಆದರೆ ಕರ್ತವ್ಯಪಾಲನೆ ಮಾಡಬೇಕಾದರೆ ಅದಕ್ಕೆ ಸರಿಯಾದ ವಾತಾವರಣ. ಈ ವಿಧಾನಸಭೆಯಲ್ಲಿ ಇರಬೇಕು. ಹೊರಗಡೆ ಬೀದಿಯಲ್ಲಿ ನಾವೂ ಮಾತನಾಡುತ್ತೇವೆ, ನೀವೂ ಮಾತನಾಡುತ್ತೀರಿ, ಅದು ಬೇರೆ ಸಮಾಚಾರ. ಆದರೆ ಈ ವಿಧಾನಸಭೆಯಲ್ಲಿ ಸರಿಯಾದ ವಾತಾವರಣ ಕಲ್ಪಿಸಿ ಮಾಡಿಂಪಂಥ ಜವಾಬ್ದಾರಿ ಕರ್ತವ್ಯ ತಮ್ಮ ಮೇಲಿದೆ. ಸರಿಯಾದ ವಾತಾವರಣ ನಿರ್ಮಾಣ ಮಾಡಿಂವುದಕ್ಕೆ ದುರದೃಷ್ಟವಶಾತ್ ನಮ್ಮ ಕೈಯಲ್ಲೂ ಆಗಲಿಲ್ಲ, ನಿಮ್ಮ ಕೈಯಲ್ಲೂ ಆಗಲಿಲ್ಲ. ಬೆಳಿಗ್ಗೆಯಿಂದ ಸಂಜೆಯತನಕ ಇಬ್ಬರೂ ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ವೇದಾಂತ ಹೆಬ್ಬಿಗೆ.—ಸಾರ್ವಜನಿಕರ ಹಣ ವೆಚ್ಚಾಗುತ್ತದೆ ಎನ್ನುವುದನ್ನು ನೋಡಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ಕರ್ತವ್ಯ ಪಾಲನೆ ಮಾಡಬೇಕು ಎಂದು ಹೇಳಿದರು. ಈ ಸಮಸ್ಯೆಯನ್ನು ಇತ್ಯರ್ಥ ಮಾಡುವುದರ ಬಗ್ಗೆ ತಾವೂ ಕೂಡ ಮಾತನಾಡಿದ್ದೀರಿ. ನಾನು ವಿಷಯವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ವೆಂಕಟರಾವಪ್ಪನವರು ಸೋಮವಾರಕ್ಕೆ ಸಭೆಯನ್ನು ಮುಂದೂಡಿ ಎಂದು ಹೇಳಿದರು ಎರಡು ದಿವಸದಲ್ಲಿ ಆಕಾಶ ಭೂಮಿಗೆ ಬರುವುದಿಲ್ಲ, ಭೂಮಿ ಆಕಾಶಕ್ಕೆ ಹೋಗುವುದಿಲ್ಲ. ಆದ್ದರಿಂದ ಅದಕ್ಕೆ ಮೊದಲು ಅಡ್ಜರ್ನ್ ಮಾಡಿದರೆ ಜನ ನಿಮಗೆ ಮರ್ಯಾದೆ ಕೊಡುತ್ತಾರೆ, ಬಹಳ ಬಿಕ್ಕಟ್ಟಿನ ಪರಿಸ್ಥಿತಿ ಇದೆ, ಅದನ್ನು ಮನಸ್ಸಿಗೆ ತೆಗೆದುಕೊಂಡು ವರ್ತಿಸಿದ್ದಾರೆ ಎಂದೂ ಹೇಳುತ್ತಾರೆ. ನಾವೂ ನಿಮಗೆ ಸಹಕಾರ ಕೊಡುತ್ತೇವೆ, ರಾತ್ರಿಯತನಕ ಕುಳಿತು ಚರ್ಚೆ ಮಾಡೋಣ. ಬೆಳಿಗ್ಗೆ ೯ ಗಂಟೆಯಿಂದ ರಾತ್ರಿ ೯ ಗಂಟೆವರೆಗೆ ಚರ್ಚೆ ಮಾಡಿ ಎಲ್ಲಾ ಡಿಮ್ಯಾಂಡ್‌ಗಳನ್ನು

ಪಾಸ್ ಮಾಡುವುದಕ್ಕೆ ತಯಾರಿದ್ದೇವೆ. ಆ ರೀತಿಯ ಮನೋಭಾವವನ್ನು ತೋರಿಸಿ ಎಂದು ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ತಾವು ಏನು ತೀರ್ಮಾನ ಮಾಡುತ್ತೀರೋ ಮಾಡಿ.

ಅಧ್ಯಕ್ಷರು.—ತಾವು ಕೂತುಕೊಳ್ಳಿ

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ತಾವು ಸಭೆ ನಡೆಯಲೇಬೇಕು ಎಂದು ತೀರ್ಮಾನ ಮಾಡುವ ಹಾಗಿದ್ದರೆ ನಾವು ಹೋಗುತ್ತೇವೆ.

ಅಧ್ಯಕ್ಷರು.—ತಾವು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೀರಿ. ಸರ್ಕಾರದವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅವರು ವೆಲ್‌ನಲ್ಲಿ ಕುಳಿತಾಗ ಸದನ ನಡೆಸುವುದಿಲ್ಲ ಎಂದು ತಾವು ಹೇಳಿ. ಎಲ್ಲಾ ಸಮಸ್ಯೆ ಬಗೆಹರಿಯುತ್ತದೆಯೇ?

ಅಧ್ಯಕ್ಷರು. ನಾನು ನಿಮ್ಮನ್ನೂ ಕೇಳಿದ್ದೇನೆ. ಅವರನ್ನೂ ಕೇಳಿದ್ದೇನೆ. ತೀರ್ಮಾನ ಕೊಡಬೇಕೋ ಬೇಡವೋ? ಈಗ ನಾನಾದರೂ ಸದನದ ಅಭಿಪ್ರಾಯದ ಮೇರೆಗೆ ಈ ಕಾರ್ಯಕ್ರಮಗಳನ್ನು ನಡೆಸಬೇಕಾಗುತ್ತದೆ. ಸದನದ ಅಭಿಪ್ರಾಯ ಎಂದರೆ ಸರ್ವಾನುಮತದ ಅಭಿಪ್ರಾಯ ಆಗಬಹುದು ಅಥವಾ ಬಹುಮತದ ಅಭಿಪ್ರಾಯ ಆಗಬಹುದು. ಇಲ್ಲಿ ನಿಮ್ಮ ಅಭಿಪ್ರಾಯ ಮತ್ತು ಅವರ ಅಭಿಪ್ರಾಯ ತೆಗೆದುಕೊಳ್ಳಬೇಕು. ತೆಗೆದುಕೊಂಡಿದ್ದೇನೆ ಸದನದ ಬಹುಮತದ ಅಭಿಪ್ರಾಯದಿಂದ ಸಭೆ ನಡೆಯಬೇಕು. ಮುಂದುವರಿಯಬೇಕು ಎನ್ನುತಕ್ಕಂಥಾದ್ದು ಇದೆ ನಿಮ್ಮ ಅಭಿಪ್ರಾಯ ಸಭೆಯನ್ನು ನಡೆಸಬಾರದು ಮುಂದಕ್ಕೆ ಹಾಕಬೇಕು ಎಂದು ಇದೆ ಅದು ಸರಿಯಲ್ಲ. ಸಭೆ ನಡೆಸಬೇಕು ಎನ್ನುವುದು ಬಹುಮತದ ಅಭಿಪ್ರಾಯವಾಗಿರುವುದರಿಂದ ಈಗ, ಸಭೆಯನ್ನು ಮುಂದುವರಿಸೋಣ. ನಾನು ತಮ್ಮೆಲ್ಲರಿಗೆ ಮಾನ್ಯ ಸದಸ್ಯರಿಗೆ ಇನ್ನೊಮ್ಮೆ ಕಳಕಳಿಯಿಂದ ವಿನಂತಿಸಿಕೊಳ್ಳುವುದು ಏನೆಂದರೆ, ತಮ್ಮ ತಮ್ಮ ಸೀಟುಗಳಿಗೆ ತಾವು ದಯಮಾಡಿಸಬೇಕು, ಕೂಡಬೇಕು, ಚರ್ಚೆಯಲ್ಲಿ ಭಾಗವಹಿಸಬೇಕು ಎನ್ನುವುದು ನನ್ನ ಇಚ್ಛೆಯಾಗಿದೆ.

(ಗೊಂದಲ)

ಶ್ರೀ ಎಂ ಎಸ್. ಕೃಷ್ಣನ್.—ನಾವು ಭಾಗವಹಿಸುವುದಿಲ್ಲ. ಪ್ರತಿಭಟನೆ ಮಾಡಿ ಹೊರಗೆ ಹೋಗುತ್ತೇವೆ. ತಮಗೆ ಪೊಜಾರಿಟಿ ಇದೆ. ನಡೆಸಿಕೊಂಡು ಹೋಗಿ.

(ಕಮ್ಯುನಿಸ್ಟ್ ಪಕ್ಷದ ಮತ್ತು ಬಿ.ಜೆ.ಪಿ.ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮುಂಜಾನೆ ಹೋದಿರಿ, ಈಗಲೂ ಹೋಗುತ್ತಿದ್ದೀರಿ. ಎಷ್ಟು ಸಲ ಬರುವುದು, ಎಷ್ಟು ಸಲ ಹೋಗುವುದು.

(ಗೊಂದಲ)

(ಕಾಂಗ್ರೆಸ್ ಸದಸ್ಯರು ಮತ್ತು ಅಧ್ಯಕ್ಷರ ನಡುವೆ ಮಾತಿನ ಚಕಮಕಿ ನಡೆಯಿತು)

ಅಧ್ಯಕ್ಷರು.—ಸ್ವಲ್ಪ ನನ್ನ ಮಾತು ಕೇಳಿ, ತಾವುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿನ್ನೆ ಹೌಸ್ ಆರ್ಡರ್‌ನಲ್ಲಿ ಇರಲಿಲ್ಲ, ಇವತ್ತು ಇದೆಯೆ ?

ಅಧ್ಯಕ್ಷರು.—ನಿಮಗೆ ಮಾತನಾಡುವುದಕ್ಕೆ ಅವಕಾಶಕೊಡುತ್ತೇನೆ. ನಿಮ್ಮ ಸ್ಥಳಗಳಿಗೆ ಹೋಗಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೌಸ್ ಆರ್ಡರ್‌ನಲ್ಲಿ ಇಲ್ಲದೇ ಹೇಗೆ ಸಭೆಯನ್ನು ನಡೆಸುತ್ತೀರಿ ?

(ಹತ್ತಾರು ಜನ ಸದಸ್ಯರು ಒಟ್ಟಿಗೆ ಮಾತನಾಡಿದರು)

ಅಧ್ಯಕ್ಷರು.—ನೀವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಹತ್ತಾರು ಜನ ಸದಸ್ಯರು ಒಟ್ಟಿಗೆ ಮಾತನಾಡಿದರು)

ಅಧ್ಯಕ್ಷರು.—ರೂಲ್ಸ್‌ನಲ್ಲಿ ಕ್ಲಿಯರ್‌ವಾಗಿ ಇದೆ. ಸ್ಥಳ ಬಿಟ್ಟು ಯಾವ ಸದಸ್ಯರು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಇವರು ಎಷ್ಟನ ಯಾವಾಗ ಮಂಡಿಸಿದರು ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮ್ಮ ಭಂಡತನ ಜಾಸ್ತಿಯಾದಾಗ ಮಂಡಿಸಿದ್ದೇವೆ.

(ಗೊಂದಲ)

ಅಧ್ಯಕ್ಷರು.— ನೀವು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನಿಮ್ಮ ನಿಮ್ಮ ಸೀಟಲ್ಲಿ ನೀವು ಏನೂ ಮಾತನಾಡಿದರೂ ಅದು ಎಕ್ಕಪಕ್ಕ ಆಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮಗೆ ಅದು ಬೇಡ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮಗೆ ಖಂಡಿತ ಕಂಡಹಾಗೆ ಸಭೆ ನಡೆಸುವುದಕ್ಕೆ ಸಾಧ್ಯವಿಲ್ಲ. ನಿಮಗೆ ಬಹುಮತ ಇದೆ, ಈ ಕಡೆ ಕರ್ಚಿಗಳೆನ್ನೆಲ್ಲಾ ತೆಗೆದುಬಿಡಿ.

ಅಧ್ಯಕ್ಷರು. —ಮುದ್ದೈಪದಿಂದ ಇಲ್ಲಿ ಸರ್ವಾನುಮತದ ಅಭಿಪ್ರಾಯ ಇಲ್ಲ. ಬಹುಮತದ ಅಭಿಪ್ರಾಯ ಇದೆ. ಆಂದಮೇಲೆ, ಬಹುಮತದ ಅಭಿಪ್ರಾಯದ ಪ್ರಕಾರ ನಾನು ಸಭೆ ನಡೆಸಿಕೊಂಡು ಹೋಗಬೇಕಾಗುತ್ತದೆ.

ಅಧ್ಯಕ್ಷರು.—ನಾನೂ ನಿಮಗೂ ಕೂಡ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಾವು ಇಷ್ಟು ಬಂದ ರೀತಿ ನಡೆದುಕೊಳ್ಳುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು.—ನೀವು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ವಾನುಮತದ ಅಭಿಪ್ರಾಯಕ್ಕೆ ನೀವು ಬಂದಿಲ್ಲ

ಅಧ್ಯಕ್ಷರು.—ಸಭೆ ನಡೆಸುವುದಕ್ಕೆ ನೀವೂ ಸಹಕಾರ ಕೊಡಿ.

(ಗೊಂದಲ)

ಅಧ್ಯಕ್ಷರು.— ನೀವು ಹೀಗೆಯೇ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಸಭೆ ನಡೆಸುವುದಕ್ಕೆ ತೊಂದರೆ ಮಾಡಬೇಡಿ. ನಾನು ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ತಾವು ಕೂಡ ಅಧ್ಯಕ್ಷರಾಗಿದ್ದೀರಿ. ನನಗಿಂತ ಹೆಚ್ಚಿನ ಅನುಭವ ತಮಗೆ ಇದೆ.

(ಗೊಂದಲ)

೬ ವರ್ಷಗಳ ಕಾಲ ತಾವು ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಲ್ಕು ದಿವಸದಿಂದ ನಾವು ನೋಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು.—ತಾವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ತಾವು ಇದೇ ರೀತಿ ಮಾಡಿದರೆ ನಾನು ಮಂತಕ್ಕೆ ಹಾಕುತ್ತೇನೆ.

(ಗೊಂದಲ)

MR. SPEAKER.—House is in order.

(ಗೊಂದಲ)

ಅಧ್ಯಕ್ಷರು.—ಈಗ ಪ್ರಸ್ತಾವವೇನೆಂದರೆ,

''೩೧–೩–೧೯೪೯ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೫೫, ೫೬ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮಿಗಾದ ಮೊಬಲಗಳನ್ನು ಮಂಜೂರು ಮಾಡಬೇಕು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

(ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಪುನರ್ ನಮೂದಿಸಲಾಗಿದೆ.)

ಬೇಡಿಕೆ ಸಂಖ್ಯೆ. ೫೫ ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೪೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೧, ೮೬, ೭೪,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.''

ಬೇಡಿಕೆ ಸಂಖ್ಯೆ. ೫೬ ಕ್ರಮಪಡಿಸಿದ ಮಾರುಕಟ್ಟೆಗಳು

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೪೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ. ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೭೫,೭೭.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.''

ಅಧ್ಯಕ್ಷರು.—ಇಂದಿನ ಸಭೆಯನ್ನು ಇಲ್ಲಿಗೆ ಮುಂಕ್ಕಾಯ ಮಾಡಿ ನಾಳೆ ಬೆಳಿಗ್ಗೆ ೧೧ ಗಂಟೆಯ ವರೆಗೂ ಮುಂದೂಡಿದ್ದೇನೆ.

(ಸದನವು ೪ ಗಂಟೆ ೪೮ ನಿಮಿಷಗಳಿಗೆ ಮುಂಕ್ಕಾಯವಾಗಿ ಮತ್ತೆ ೨೦–೩–೧೯೪೯ರ ಶುಕ್ರವಾರ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)